ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ




**ಬೆಂಗಳೂರು:** ವಿಶ್ವ ಸಂವಾದ ಕೇಂದ್ರ, ಕರ್ನಾಟಕ ವರ್ಷಂಪ್ರತಿ ಕೊಡಮಾಡುವ ವಿಎಸ್ ಕೆ ಮಾಧ್ಯಮ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಸಹ ಬೌದ್ಧಿಕ್ ಪ್ರಮುಖ್ ಸುಧೀರ್, ವಿಶ್ವ ಸಂವಾದ ಕೇಂದ್ರ, ಕರ್ನಾಟಕದ ಅಧ್ಯಕ್ಷ ಡಾ|| ವಿ. ಶ್ರೀಧರ ಆರು ಪತ್ರಕರ್ತರಿಗೆ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

ಸಂಪುಟ : 47 | ಸಂಚಿಕೆ : 06 | ಆಷಾಢ–ಶ್ರಾವಣ | ಕಲಿಯುಗಾಬ್ದ 5127 | 15–07–2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

# ಭಾರತಶಕ್ತಿಯನ್ನು ವಿಶ್ವಕ್ಕೆ ಪರಿಚಯಿಸಿದ ಕದನ - ಕಾರ್ಗಿಲ್ ವೀರಕಥನ



ಜೂನ್ 26, 1999. ಈ ದಿನ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ದಿನ. ಏಕೆಂದರೆ 1948, 1965, 1971ರಲ್ಲಿ ಭಾರತದ ಭೂಭಾಗ ಕಬಳಿಸುವ ದುರುದ್ದೇಶದಿಂದ ಭಾರತದ ಮೇಲೆ ಆಕ್ರಮಣ ಮಾಡಿದ ಪಾಕಿಸ್ತಾನ ಘೋರ ಸೋಲನ್ನು ಅನುಭವಿಸಿದ್ದರೂ, 1999ರಲ್ಲಿ ಮತ್ತೊಮ್ಮೆ ಭಾರತದ ವಿರುದ್ಧ ಸೆಣೆಸುವ ದುಸ್ಸಾಹಸಕ್ಕೆ ಕೈ ಹಾಕುತ್ತದೆ. ಆದರೆ ನಮ್ಮ ಸೈನಿಕರ ಧೈರ್ಯ, ಸಾಹಸ, ಪರಾಕ್ರಮದಿಂದ ಈ ಯುದ್ಧವನ್ನೂ ಗೆದ್ದ ಭಾರತ ಪಾಕಿಸ್ತಾನಕ್ಕೆ ತಕ್ಕ ಉತ್ತರವನ್ನೂ, ವಿಶ್ವಕ್ಕೆ ಭಾರತದ ಸೈನಿಕರ ಸಾಮರ್ಥ್ಯದ ಪರಿಚಯವನ್ನು ಮಾಡಿಕೊಡುತ್ತದೆ. ಈ ಯುದ್ಧಕ್ಕೆ "ಆಪರೇಶನ್ ವಿಜಯ್" ಎಂಬ ಹೆಸರಿಟ್ಟ ಕಾರಣ ಯುದ್ಧ ಗೆದ್ದನಂತರ ರಾಷ್ಟ್ರಾದ್ಯಂತ ವಿಜಯ್ ದಿವಸನ್ನು ಆಚರಿಸಲಾಗುತ್ತದೆ. ಈ ವಿಜಯೋತ್ಸವಕ್ಕೆ ಈ ವರ್ಷ 26ನೇ ಸಂವತ್ಸರ.

ಕಾರ್ಗಿಲ್! ಕಾಶ್ಮೀರದ ಶ್ರೀನಗರದಿಂದ 205 ಕಿ.ಮೀ. ದೂರದಲ್ಲಿರುವ ಹಿಮಾಲಯದ ಬೆಟ್ಟಗುಡ್ಡಗಳಿಂದ ಆವೃತವಾದ ಪ್ರದೇಶ. ವಿಶ್ವದ ಅತ್ಯಂತ ಎತ್ತರದಲ್ಲಿರುವ ಯುದ್ಧ ಭೂಮಿ ಸಿಯಾಚಿನ್‌ಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 1 ಇದೇ ಕಾರ್ಗಿಲ್ ಮೂಲಕ ಹಾದು ಹೋಗುತ್ತದೆ. ಇದೇ ಪ್ರದೇಶದಲ್ಲಿ ಭಾರತ ಮತ್ತು ಪಾಕಿಸ್ತಾನದ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಇದೆ. ಚಳಿಗಾಲದಲ್ಲಿ ಮೈನಸ್ ಡಿಗ್ರಿಗೆ ಇಳಿಯುವ ತಾಪಮಾನದಿಂದಾಗಿ ಇಲ್ಲಿ ಗಡಿ ಕಾಯುವುದು ಭಾರತಕ್ಕೆ ಸದಾ ಸವಾಲಿನ ಕೆಲಸ. ಮೊದಲಿನಿಂದಲೂ ಜೆಂಟಲ್‌ಮನ್ ಒಪ್ಪಂದದ ಪ್ರಕಾರ ಎರಡೂ ರಾಷ್ಟ್ರದ ಸೇನೆ ಚಳಿಗಾಲದಲ್ಲಿ ಬೇಸ್‌ಕ್ಯಾಂಪ್‌ಗೆ ತೆರಳಬೇಕಿತ್ತು. ಆದರೆ ಪಾಕಿಸ್ತಾನ ತಂತ್ರಹೂಡಿ ಈ ಸಮಯವನ್ನು ಅಚ್ಚುಕಟ್ಟಾಗಿ ಬಳಸಿಕೊಂಡಿತು. ತಯಾರಿ ಹೇಗಿತ್ತು ಗೊತ್ತೇನು?. ಪಾಕಿಸ್ತಾನಿ ಸೇನೆಯೊಂದಿಗೆ ದೀರ್ಘಕಾಲದ ಗೆಳತನ ಹೊಂದಿರುವ ಜಮಾಲ್–ಎ–ಇಸ್ಲಾಮಿಯೆಂಬ ಜಿಹಾದಿ ತಂಡದೊಡಗೂಡಿ ಭಯೋತ್ಪಾದಕರ ವೇಷಧರಿಸಿ ಗುಡ್ಡವನ್ನೇರಿ, ಬಂಕರ್‌ಗಳನ್ನು ವಶಪಡಿಸಿಕೊಂಡು, ತಾತ್ಕಾಲಿಕ ಸಂಗರ್‌ಗಳನ್ನೂ ನಿರ್ಮಿಸಿತ್ತು. ಮಾಹಿತಿಗಳ ಪ್ರಕಾರ ಲಾಹೋರ್ ಒಪ್ಪಂದಕ್ಕೂ ಮುನ್ನ ಪಾಕಿಸ್ತಾನ ಯುದ್ಧದ ತಂತ್ರವನ್ನು ಹೂಡಿಯಾಗಿತ್ತು. ಆದ್ದರಿಂದ 1999ರಲ್ಲಿ ಫೆಬ್ರವರಿಯ ಮೊದಲ ಭಾಗದಲ್ಲಿ ಭಾರತಕ್ಕೆ ಚಿಕ್ಕಪುಟ್ಟ ದಾಳಿಗಳನ್ನು ಮಾಡಲು ಪ್ರಾರಂಭಿಸಿತು. ರಜೌರಿ, ಪೂಂಚ್, ಗಂದರ್‌ಬಾಲ್, ಅನಂತ್‌ನಾಗ್ ಹಾಗೂ ಇನ್ನಿತರ ಸಮೀಪದ ಪ್ರದೇಶಗಳ ಸುತ್ತಲೇ ಭಯೋತ್ಪಾದಕ ಕೃತ್ಯಗಳನ್ನು ನಡೆಸುತ್ತಿದ್ದರಿಂದ ಪಾಕಿಸ್ತಾನದ ಉದ್ದೇಶ ಭಾರತದ ಭೂಭಾಗವನ್ನು ಕಬಳಿಸುವುದೆನ್ನುವುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು.

1999ರ ಮೇ.9, 10ರಂದು ಸೇನಾ ಬ್ರಿಗೇಡ್‌ನ ಶಸ್ತ್ರಾಸ್ತ್ರ ಘಟಕದ ಹತ್ತಿರಕ್ಕೆ ಪಾಕಿಸ್ತಾನದ ಬಾಂಬ್ ಶೆಲ್ ಬಂದು ಬಿತ್ತು. ಅದು ಶಕ್ತಗುರಿಯೆಂದು ಸೇನೆ ಭಾವಿಸಲಿಲ್ಲ. ಆದರೆ ಮರುದಿನ ಗುಡ್ಡದ ಮೇಲೆ ಕುರಿಗಳನ್ನು ಮೇಯಿಸಲು ಹೋದ ಒಂದಷ್ಟು ತರುಣರು ಅಪರಿಚಿತರನ್ನು ಗುರುತಿಸಿ ಸೇನಾ ಠಾಣ್ಯಕ್ಕೆ ವಿಷಯ ಮುಟ್ಟಿಸಿದರು. ಮೇ 12ರೊಳಗೆ ಭಯೋತ್ಪಾದಕರು ಬಂದು ಕುಳಿತಿರುವುದು ಸೇನೆಗೆ ಖಾತ್ರಿಯಾಗಿತ್ತು. ನುಸಳುಕೋರರು ಬಂದಿದ್ದಾರೆ ಎಂದೇ ಭಾವಿಸಿದ್ದ ಅಂದಿನ ರಕ್ಷಣ ಸಚಿವ ಜಾಜ್ ಫೆರ್ನಾಂಡಿಸ್ 48 ಗಂಟೆಗಳಲ್ಲಿ ಅವರನ್ನು ಹೊರದಬ್ಬುತ್ತೇವೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸುತ್ತಾರೆ. ಆದರೆ ಅಲ್ಲಿಗೆ ಬಂದದ್ದು ಪಾಕಿಸ್ತಾನದ ಸುಸಜ್ಜಿತ ಸೇನೆಯೇ ಆಗಿತ್ತು.

ವಿಷಯ ತಿಳಿದ ಮರುದಿನವೆ ಸೇನೆ ಜಾಟ್ ರೆಜಿಮೆಂಟಿನ ಕ್ಯಾಪ್ಟನ್ ಸೌರಭ್ ಕಾಲಿಯ ಹಾಗೂ 6 ಜನರ ತಂಡ ಗುಡ್ಡವೇರಲು ಬೇಕಾದಷ್ಟು ಮಂಜು ಕರಗಿದೆಯೇ ಎಂದು ನೋಡಲು ಕಕ್ಸರ್ ಭಾಗದ ಬಜರಂಗ್ ಪೋಸ್ಟ್‌ನತ್ತ ಹೊರಟರು. ಆಗ ಬಂಕರ್‌ಗಳನ್ನು ಆವರಿಸಿಕೊಂಡ ದೊಡ್ಡ ನುಸುಳುಕೋರರ ಕುರಿತಾದ ಮೊದಲ ಮಾಹಿತಿ ಸೇನೆಗೆ ತಲುಪಿಸುತ್ತಾರೆ. ತನ್ನ ವ್ಯಾಪ್ತಿಯ ಗುಡ್ಡವನ್ನು ನುಸಳುಕೋರರು ಆಕ್ರಮಿಸಿರುವುದನ್ನು ಸಹಿಸದ ಕ್ಯಾ.ಸೌರಭ್ ಕಾಲಿಯ ತನ್ನ ತಂಡದೊಡನೆ ಯುದ್ಧಕ್ಕಿಳಿದರು. ಶತ್ರುವನ್ನು ಅಂದಾಜಿಸುವುದರಲ್ಲಿ ಎಡವಿದ್ದು ತಿಳಿದ ತಂಡ ಹಿಂದೆ ಹೋಗುವುದನ್ನೊಪ್ಪದೆ ಕೊಂಡೊಯ್ದ ಗುಂಡುಗಳು ಮುಗಿದರೂ ಯುದ್ಧವನ್ನು ಮುಂದುವರಿಸುತ್ತಾರೆ. ಆದರೆ ತಕ್ಷಣ ಸುತ್ತುವರಿದ ಪಾಕಿಸೇನೆ ಜೀವಂತವಾಗಿ ಅವರನ್ನು ಬಂಧಿಸುತ್ತಾರೆ. 22 ದಿನಗಳಕಾಲ ಕ್ಯಾ.ಸೌರಭ್ ಕಾಲಿಯರಿಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆಕೊಟ್ಟು ಗುಂಡಿಟ್ಟು ಕೊಲ್ಲಲಾಗುತ್ತದೆ. ಶವವನ್ನು ಭಾರತಕ್ಕೆ ಹಸ್ತಾಂತರಿಸಿದಾಗ ನಮ್ಮ ಯೋಧರನ್ನು ಕೆಟ್ಟದಾಗಿ ನಡೆಸಿಕೊಂಡ ಪಾಕಿಸ್ತಾನದ ನಡೆಯನ್ನು ಕಂಡು ಸೇನೆಯ ಎಲ್ಲಾ ಸೈನಿಕರೂ ಬೆಚ್ಚಿಬೀಳುತ್ತಾರೆ ಮತ್ತು ಇದಕ್ಕೆ ತಕ್ಕ ಉತ್ತರವನ್ನು ನೀಡಬೇಕೆಂದು ನಿಶ್ಚಯಿಸುತ್ತಾರೆ.

1999ರಲ್ಲಿ ಕಾರ್ಗಿಲ್ ಕದನವು ಆರಂಭವಾದದ್ದು ಹೀಗೆ! ಈ ಘಟನೆಯ ನಂತರ ದೇಶದೆಲ್ಲೆಡೆ ಸಂಚಲನ ಮೂಡುತ್ತದೆ. ಮೇ 3ರಂದು ಆರಂಭವಾದ ಕಾರ್ಯಾಚರಣೆ ನಿಜಕ್ಕೂ ದೊಡ್ಡ ಸವಾಲಾಗಿತ್ತು. ಪರ್ವತ ಶ್ರೇಣಿಯ ಮೇಲಿರುವ ಪಾಕ್ ಸೈನಿಕರನ್ನು ಕೆಳಗಿನಿಂದ ಎದುರಿಸುವುದು ಸುಲಭವಾಗಿರಲಿಲ್ಲ. ತುಸು ಚಲನೆ ಕಂಡರೂ ಮೇಲಿನಿಂದ ಗುಂಡಿನ ಸುರಿಮಳೆ ಆಗುತ್ತಿತ್ತು. ಆದರೆ ನಮ್ಮ ದೇಶದ ಶಕ್ತಿಯಾದ ಕಾಲ್ದಳ, ವಾಯುದಳ ಹಾಗೂ ನೌಕದಳ ಒಟ್ಟಾಗಿ ಹೋರಾಡಲು ನಿಶ್ಚಯಿಸುತ್ತದೆ. ಇದನ್ನು ಗಂಭೀರವಾಗಿ ಪರಿಗಣಿಸಿದ ವಾಯುಪಡೆ ಮೇ 26ರಿಂದ ಭೂಸೇನೆಯ ಜೊತೆಗೆ ನಿಂತಿತು. ಭೂಸೇನೆಗೆ ವಾಯುಪಡೆ ಸಾಥ್ ಕೊಟ್ಟ ಬೆನ್ನಲ್ಲೇ ನೌಕಾಪಡೆ ತಾನೂ ಆಪರೇಷನ್ ವಿಜಯಕ್ಕೆ ಕೈ ಜೋಡಿಸಿತು. 'ಆಪರೇಶನ್ ತಲವಾರ್' ಎಂಬ ಹೆಸರಿನಲ್ಲಿ ಅರಬ್ಬಿ ಸಮುದ್ರದಲ್ಲಿ ತನ್ನ ಹಿಡಿತ ಹೆಚ್ಚಿಸಿಕೊಳ್ಳುವ ಮೂಲಕ ಪಾಕಿಸ್ತಾನಕ್ಕೆ ಪೆಟ್ರೋಲಿಯಂ ಉತ್ಪನ್ನಗಳು ತಲುಪದಂತೆ ಮಾಡಿತು. ನೌಕಾಪಡೆ ಮಾಡಿದ ಅನಿರೀಕ್ಷಿತ ದಾಳಿ ಪಾಕಿಸ್ತಾನಕ್ಕೆ ದೊಡ್ಡ ಹೊಡೆತ ಕೊಟ್ಟಿತು. ಇತ್ತ ವಾಯುಪಡೆಯ ಆಪರೇಷನ್ ಸಫೇದ್ ಸಾಗರ್ ಪಾಕ್ ಸೈನಿಕರನ್ನು ಘಾಸಿಗೊಳಿಸಿತ್ತು.


ಕ್ಯಾನ್‌ಬೆರ್ರಾ ಎಂಬ ಪರಿಶೋಧನೆಯ ವಿಮಾನದ ಮೂಲಕ ಗುಡ್ಡಗಳ ಮೇಲಿನ ಸ್ಥಿತಿಯ ಕುರಿತು ಮಾಹಿತಿ ದೊರೆತವು. ನಂತರದ ದಿನಗಳಲ್ಲಿ ಹಲವಾರು ವೀರ ಸೈನಿಕರ ಪ್ರಾಣಾರ್ಪಣೆಯಿಂದಾಗಿ ಪಾಕಿಗಳ ವಶದಲ್ಲಿದ್ದ ಒಂದೊಂದೆ ಪರ್ವತವನ್ನು ಗೆಲ್ಲಲಾಗುತ್ತದೆ. ತೋಲೋಲಿಂಗ್, ಪಾಯಿಂಟ್ 5140, ಪಾಯಿಂಟ್ 4700, ಥ್ರೀ ಪಿಂಪಲ್, ಟೈಗರ್ ಹಿಲ್, ದ್ರಾಸ್ ವಿಭಾಗದ ಸ್ಥಳಗಳು, ಪಿಂಪಲ್ 2, ಜುಬೇರ್ ಹಿಲ್ (ಇದನ್ನು ಗೆದ್ದರೆ ಪಾಯಿಂಟ್ 4812, ಖಾಲೂಬಾರ್, ಪಾಯಿಂಟ್ 5827ಗಳನ್ನು ನಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಸಹಾಯವಾಗುತ್ತದೆ.), ಪಾಯಿಂಟ್ 5500, ಪಾಯಿಂಟ್5590 ಹಾಗೂ ಇನ್ನಿತರ ಗುಡ್ಡಗಳನ್ನು ಗೆದ್ದು ವಿಶ್ವಮಟ್ಟದಲ್ಲಿ ನಮ್ಮ ಸೇನೆ ಸೈ ಎನಿಸಿಕೊಳ್ಳುತ್ತದೆ. ಈ ಎಲ್ಲಾ ಗುಡ್ಡಗಳನ್ನು ಗೆಲ್ಲುವುದು ಸುಲಭದ ಮಾತಗಿರಲಿಲ್ಲ. ನೆನಪಿರಲಿ ನಮ್ಮ ಸೈನಿಕರು ಗುಡ್ಡಗಳ ಕೆಳಗಿನಿಂದ ಯುದ್ಧ ಮಾಡಬೇಕಿತ್ತು!. ಮೇಲಿಂದ ಒಂದು ಬಂಡೆಗಲ್ಲು ತಳ್ಳಿದ್ದರೂ ಹಲವಾರು ಸೈನಿಕರು ಪ್ರಾಣ ಕಳೆದುಕೊಳ್ಳುವಂತಹ ಸ್ಥಿತಿ. ಹೀಗಿದ್ದರೂ ಕೂಡ ಭಾರತ ಈ ಯುದ್ಧದಲ್ಲಿ ವಿಜಯ ಪತಾಕೆಯನ್ನು ಹಾರಿಸುತ್ತದೆ. ಈ ವಿಜಯಕ್ಕಾಗಿ ನಾವು ಕಳೆದು ಕೊಂಡಿದ್ದು ಅಜಯ್ ಅಹುಜಾ, ಮೇ.ರಾಜೇಶ್ ಅಧಿಕಾರಿ, ಆರ್.ಪುಂಡಿರ್, ಮುಹಿಲನ್, ವಿವೇಕ್ ಗುಪ್ತ, ವಿಕ್ರಂ ಬಾತ್ರ, ಮೇ.ಪದ್ಮಪಾಣಿ ಆಚಾರ್ಯ, ರೈಫಲ್ ಮ್ಯಾನ್ ಸಂಜಯ್ ಕುಮಾರ್, ಮನೋಜ್ ಕುಮಾರ್ ಪಾಂಡೆಯಂತಹ ಅನರ್ಘ್ಯ ರತ್ನಗಳನ್ನು. ಅಕಸ್ಮಾತ್ ನಮ್ಮ ಸೈನಿಕರು ವೀರಾವೇಶದಿಂದ ಹೋರಾಡಿ ವಿಜಯ ದೊರಕಿಸಿಕೊಡದಿದ್ದರೆ ಇಂದು ಭಾರತದ ಅನೇಕ ಪ್ರದೇಶಗಳು ಪಾಕಿಸ್ತಾನಕ್ಕೆ ಸೇರಿರುತ್ತಿತ್ತು. ಭೂಸೇನೆಯ ಸತತ ಪ್ರಯತ್ನದಿಂದ ಟೋಲೋಲಿಂಗ್, ಟೈಗರ್ ಹಿಲ್ಸ್, ದ್ರಾಸ್ ಮತ್ತು ಇತರ ಭೂಭಾಗಗಳನ್ನು ವಶಪಡಿಸಿತು. ಎರಡು ತಿಂಗಳುಗಳ ಕಾರ್ಯಾಚರಣೆಯ ಮೂಲಕ ಬಹುತೇಕ ಭಾಗಗಳು ಭಾರತವು ಪುನಃ ತನ್ನ ತೆಕ್ಕೆಗೆ ತೆಗೆದುಕೊಂಡ ಮೇಲೆ ಅಂತಾರಾಷ್ಟ್ರೀಯ ಮಟ್ಟದ ಒತ್ತಡದಿಂದಾಗಿ ಪಾಕಿಸ್ತಾನ ತನ್ನ ಸೇನೆಯನ್ನು ಹಿಂದಕ್ಕೆ ಕರೆಸಿತು.

1999ರ ಕಾರ್ಗಿಲ್ ಕದನದಲ್ಲಿ ಭಾರತದ ಗೆಲುವನ್ನು ಜುಲೈ 26ರಂದು ಅಧಿಕೃತವಾಗಿ ಘೋಷಣೆ ಮಾಡಲಾಯಿತು. ಈ ಯುದ್ಧದಲ್ಲಿ ತಾಯಿ ಭಾರತಿ ಕಳೆದುಕೊಂಡದ್ದು 527 ಪರಾಕ್ರಮಿ ಪುತ್ರರನ್ನು! ಜಗತ್ತಿನ ಅತ್ಯಂತ ದುರ್ಗಮ ಪ್ರದೇಶಗಳಲ್ಲಿ ಒಂದಾದ ಕಾರ್ಗಿಲ್‌ನಲ್ಲಿ ನಡೆದ ಕದನದಲ್ಲಿ ಭಾರತ ಕಂಡ ವಿಜಯವು ಐತಿಹಾಸಿಕ ಮಾತ್ರವಾಗಿರದೆ, 527 ಯೋಧರ ಬಲಿದಾನದ ಫಲವಾದ್ದರಿಂದ ಇಡೀ ದೇಶ ಭಾವನಾತ್ಮಕವಾಗಿ ಕಂಬನಿ ಮಿಡಿಯಿತು. ಯೋಧರು ಪ್ರಾಣ ಒತ್ತೆ ಇಟ್ಟು ದೇಶಕ್ಕಾಗಿ ಹೋರಾಟ ಮಾಡಿ ಕೊನೆಗೆ ಶಿಖರದ ಮೇಲೆ ತಿರಂಗಾ ಹಾರಿಸಿ ವಿಜಯವನ್ನು ಆಚರಿಸಿಕೊಂಡ ಆ ಅಪೂರ್ವ ಕ್ಷಣಗಳನ್ನು ದೂರದರ್ಶನದ ಮೂಲಕ ಇಡೀ ದೇಶ ಬೆರಗಾಗಿ ನೋಡಿತು.

ಭಾರತದ ಸ್ವಾತಂತ್ರ್ಯಕ್ಕೆ ಹೇಗೆ ಲಕ್ಷಾಂತರ ಮಹಾಪುರುಷರು ಕಾರಣವೋ, ಹಾಗೆ ಇಂದು ನಾವು ಈ ವಿಶಾಲವಾದ ರಾಷ್ಟ್ರದ ಪುಟ್ಟ ಗ್ರಾಮದಲ್ಲಿ ನಿರ್ಭಯವಾಗಿ ಜೀವಿಸಲು ಸೈನಿಕರು ಕಾರಣ. ಹಗಲು ರಾತ್ರಿಯೆನ್ನದೆ ತಮ್ಮ ಪ್ರಾಣವನ್ನು ಒತ್ತೆಯಿಟ್ಟು ರಾಷ್ಟ್ರದ ಸುರಕ್ಷತೆಗಾಗಿ ದುಡಿಯುತ್ತಾರಲ್ಲ ನಿಜಕ್ಕೂ ಅವರು ಶ್ರೇಷ್ಠರು. ನಮ್ಮ ಜೀವನದಲ್ಲಿ ಯಾರನ್ನು ಮರೆತರೂ ರಾಷ್ಟ್ರ ಕಾಯೊ ಯೋಧ, ಅನ್ನದಾತ ರೈತ ಹಾಗೂ ರಾಷ್ಟ್ರದ ಒಳಿತಿಗಾಗಿ ದುಡಿದ ಹಾಗೂ ದುಡಿಯುತ್ತಿರುವವರನ್ನೂ ಮಾತ್ರ ಮರೆಯಬಾರದು.

## ಸಂಸ್ಮರಣೆ

# ಡಾ. ಎ.ಪಿ.ಜೆ. ಅಬ್ದುಲ್ ಕಲಾಂ



ಡಾ. ಎಪಿಜೆ ಅಬ್ದುಲ್ ಕಲಾಂ ಭಾರತದ ವಿಜ್ಞಾನಿ, ರಾಜಕಾರಣಿಯಾಗಿ ಪ್ರಸಿದ್ಧಿ ಪಡೆದವರು.ಇವರು ಭಾರತದ ಕ್ಷಿಪಣಿ ಮತ್ತು ಪರಮಾಣು ಶಸ್ತ್ರಾಸ್ತ್ರಗಳ ಕಾರ್ಯಕ್ರಮಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದವರು. ಕಲಾಂ ಅವರು ರಾಷ್ಟ್ರಪತಿಯಾಗಿ ನೀಡಿರುವ ಕೊಡುಗೆ ಅಪಾರ. ಭಾರತದ 11ನೇಯ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದವರು.

**ಪರಿಚಯ:** ಅವುಲ್ ಪಕೀರ್ ಜೈನುಲಬ್ದೀನ್ ಅಬ್ದುಲ್ ಕಲಾಂ ಅಕ್ಟೋಬರ್ 15, 1931 ರಂದು ತಮಿಳುನಾಡಿನ ರಾಮೇಶ್ವರಂನಲ್ಲಿ ಜನಿಸಿದರು. ಇವರ ತಂದೆ ಜೈನುಲಾಬ್ದೀನ್, ತಾಯಿ ಆಶಿಯಮ್ಮ. ಅವರ ಕುಟುಂಬ ಬಡತನದಿಂದ ಕೂಡಿದ್ದರಿಂದ ಅಬ್ದುಲ್ ಕಲಾಂ ಅವರು ತಮ್ಮ ತಂದೆಗೆ ಆರ್ಥಿಕ ಸಹಾಯ ಮಾಡುವ ಸಲುವಾಗಿ ಚಿಕ್ಕ ವಯಸ್ಸಿನಲ್ಲಿಯೇ ಕೆಲಸ ಪ್ರಾರಂಭಿಸಿದರು. ಅವರು ಶಾಲೆಯ ನಂತರ ತಮ್ಮ ಸಂಶುದ್ದೀನ್ ಕಲಾಂ ಜೊತೆಗೆ ಪತ್ರಿಕೆಗಳನ್ನು ವಿತರಣೆ ಮಾಡುತ್ತಿದ್ದರು.

ಅಬ್ದುಲ್ ಕಲಾಂ ಅವರು ಆರಂಭಿಕ ಶಿಕ್ಷಣವನ್ನು ರಾಮನಾಥಪುರಂನ ಶ್ವಾರ್ಟ್ಜ್ ಮೆಟ್ರಿಕ್ಯುಲೇಷನ್ ಶಾಲೆಯಲ್ಲಿ ಮುಗಿಸಿದರು. ನಂತರ ತಿರುಚಿರಾಪಳ್ಳಿಯಲ್ಲಿ ಕಲಾಂ ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಓದಿದ್ದರು. 1954ರಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಭೌತಶಾಸ್ತ್ರದಲ್ಲಿ ಪದವಿಯನ್ನು ಪಡೆದರು. ಅವರಿಗೆ ಗಣಿತ ವಿಷಯದಲ್ಲಿ ತುಂಬಾ ಆಸಕ್ತಿ ಇತ್ತು. ಹೀಗಾಗಿ ಅವರು ಗಣಿತವನ್ನೇ ಅತೀ ಹೆಚ್ಚು ಸಮಯ ಅಧ್ಯಯನ ಮಾಡುತ್ತಿದ್ದರು.

**ವೃತ್ತಿ ಜೀವನ:** 1960ರಲ್ಲಿ ಮದ್ರಾಸ್ ತಾಂತ್ರಿಕ ಮಹಾವಿದ್ಯಾಲಯದಿಂದ ಪದವಿ ಪಡೆದ ನಂತರ ಕಲಾಂ ಅವರು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಓ)ಯ ವಾಯುಯಾನವಿಜ್ಞಾನ ಅಭಿವೃದ್ಧಿ ವಿಭಾಗದಲ್ಲಿ ವೃತ್ತಿಜೀವನ ಪ್ರಾರಂಭಿಸಿದರು. ಪ್ರಾರಂಭದಲ್ಲಿ ಭಾರತದ ಭೂ ಸೇನೆಗೆ ಸಣ್ಣ ಹೆಲಿಕಾಪ್ಟರ್‌ಗಳನ್ನು ವಿನ್ಯಾಸ ಮಾಡುತ್ತಿದ್ದರು. ನಂತರ ಬಾಹ್ಯಾಕಾಶ ವಿಜ್ಞಾನಿ ವಿಕ್ರಂ ಸಾರಾಭಾಯ್ ಅವರ ಅಡಿಯಲ್ಲಿದ್ದ ಇನ್ಕೋಸ್ಪಾರ್ ಸಮಿತಿ ಕೆಲಸಕ್ಕೆ ಸೇರಿಕೊಂಡರು.

1969ರಲ್ಲಿ ಕಲಾಂ ಅವರನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗೆ (ಇಸ್ರೋ) ವರ್ಗಾಯಿಸಲಾಯಿತು. ಅಲ್ಲಿ ಅವರು ರೋಹಿಣಿ ಉಪಗ್ರಹವನ್ನು 1980ರಲ್ಲಿ ಭೂಮಿಯ ಕಕ್ಷೆಯನ್ನು ಸೇರಿಸಿದರು. ನಂತರ ಅವರು ಭಾರತದ ಮೊದಲ ಉಪಗ್ರಹ ಉಡಾವಣಾ ವಾಹನ (ಎಸ್.ಎಲ್.ವಿ–III)ರ ಯೋಜನಾ ನಿರ್ದೇಶಕರಾದರು. 1980ರಲ್ಲಿ ಕಲಾಂ ಅವರು ಪೋಲಾರ್ ಉಪಗ್ರಹ ವಾಹನ (ಪಿ.ಎಸ್.ಎಲ್.ವಿ) ಮತ್ತು ಎಸ್.ಎಲ್.ವಿ–III ಯೋಜನೆಗಳನ್ನು ಅಭಿವೃದ್ಧಿ ಪಡಿಸುವ ಪ್ರಯತ್ನ ಮಾಡಿದರು. ಕಲಾಂ ಅವರು ಜುಲೈ 1992ರಿಂದ ಡಿಸೆಂಬರ್ 1999ರವರೆಗೆ ಪ್ರಧಾನಮಂತ್ರಿ ಮತ್ತು ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆಯ ಕಾರ್ಯದರ್ಶಿಯಾಗಿ ಮುಖ್ಯ ವೈಜ್ಞಾನಿಕ ಸಲಹೆಗಾರರಾಗಿ ಸೇವೆ ಸಲ್ಲಿಸಿದರು. ಜುಲೈ25, 2002 ರಂದು ಭಾರತದ 11ನೇ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದರು.

**ಸಾಹಿತ್ಯ ಕೊಡುಗೆ:** ಎಪಿಜೆ ಅಬ್ದುಲ್ ಕಲಾಂ ಅವರು ಸಾಹಿತ್ಯದ ಕಡೆ ಹೆಚ್ಚು ಒಲವು ತೋರಿದ್ದರು. ಇವರು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಹತ್ತಾರು ಗ್ರಂಥಗಳನ್ನು ರಚಿಸಿದ್ದಾರೆ. 'ವಿಂಗ್ಸ್ ಆಫ್ ಫೈರ್' ಎಂಬ ಆತ್ಮಕಥೆಯನ್ನು ಬರೆದಿದ್ದಾರೆ. 'ಇಂಡಿಯಾ ಮೈ ಡ್ರೀಮ್', 'ಮೈ ಜರ್ನಿ', 'ಟಾರ್ಗೆಟ್ 3 ಬಿಲಿಯನ್' ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿದ್ದಾರೆ.

**ಪ್ರಶಸ್ತಿ:** 1981ರಲ್ಲಿ ಭಾರತ ಸರ್ಕಾರದಿಂದ ಕಲಾಂ ಅವರಿಗೆ ಪದ್ಮಭೂಷಣ ಹಾಗೂ 1990ರಲ್ಲಿ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. 1997ರಲ್ಲಿ ಕಲಾಂ ಅವರಿಗೆ ಭಾರತ ಸರ್ಕಾರದಿಂದ ಭಾರತರತ್ನ ಪ್ರಶಸ್ತಿ ನೀಡಲಾಯಿತು. 1998ರಲ್ಲಿ ಭಾರತ ಸರ್ಕಾರದಿಂದ ವೀರ್ ಸಾವರ್ಕರ್ ಪ್ರಶಸ್ತಿ ನೀಡಿ ಗೌರವಿಸಿದೆ. 2014ರಲ್ಲಿ ಎಡಿನ್‌ಬರ್ಗ್ ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಸೈನ್ಸ್ ಎಂಬ ಗೌರವ ಪ್ರಶಸ್ತಿ ನೀಡಲಾಗಿದೆ.

ಎಪಿಜೆ ಅಬ್ದುಲ್ ಕಲಾಂ ಅವರು ಜುಲೈ 27, 2015 ರಂದು ನಿಧನರಾದರು.

# ಪ್ರಕೃತಿಯಿಂದ ದೊರೆತ ಆತ್ಮವಿಶ್ವಾಸ

ಅಸ್ಸಾಂನ ಅದ್ಭುತವಾದ ಕಲೆಗಳಲ್ಲಿ ಒಂದು ಬ್ಯಾಂಬೂ ಕ್ರಾಫ್ಟ್. ಈ ಕಲೆಯನ್ನು ವನವಾಸಿಗಳ ಜೀವನಾಧಾರವಾಗಿ ಪರಿವರ್ತಿಸುವಲ್ಲಿ ಶ್ರಮಿಸಿದ ಸೇವಾಭಾರತಿಯು "ಪಾಂಚಜನ್ಯ ಗುಡಿ ಕೈಗಾರಿಕೆ"ಯ ಮೂಲಕ 2022ರವರೆಗೆ 50 ಲಕ್ಷದ ವ್ಯಾಪಾರ ನಡೆಸಿದೆ ಮತ್ತು 60ಕ್ಕೂ ಹೆಚ್ಚಿನ ಗ್ರಾಮಗಳಿಗೆ ಇದರಿಂದ ಲಾಭವಾಗಿದೆ. ಸಾವಿರಾರು ಕೈಗಳು ಬಿದಿರಿನ ಕಲಾತ್ಮಕ ವಸ್ತುಗಳನ್ನು ಮಾಡಿ ಸ್ಥಳೀಯ ಮಾರುಕಟ್ಟೆ, ಸೌರಾಷ್ಟ್ರ ಮೇಳ, ಟ್ರೇಡ್‌ಫೇರ್, ಬಿಹೂ ಮಳಿಗೆ, ಅಸ್ಸಾಂ ಮೇಳ, ಮೊದಲಾದ ಪ್ರದರ್ಶನಗಳ ಲಾಭವನ್ನು ಪಡೆದು ತಮ್ಮ ಜೀವನದ ಉನ್ನತಿಯ ಮುಂಚೂಣಿಯಲ್ಲಿವೆ.

2009ರಿಂದ ಸೇವಾಭಾರತಿಯೊಂದಿಗೆ ತಮ್ಮನ್ನು ಜೋಡಿಸಿಕೊಂಡಿರುವ ಜಿಲ್ಲಾ ಸಂಯೋಜಕರಾದ ಅವಿನಾಶ್ ಹಜಾರಿಕಾ ಅವರು ಸ್ವತ: ತಾವೇ ಬಿದಿರಿನ ವಸ್ತುಗಳನ್ನು ಮಾಡುವ ತರಬೇತಿಯನ್ನು ಪಡೆದು ಆತ್ಮನಿರ್ಭರರಾದರು. 2022ರವರೆಗೆ ಸಾವಿರಾರು ಜನರಿಗೆ ಬಿದಿರಿನ ಅನೇಕ ವಸ್ತುಗಳನ್ನು ತಯಾರಿಸುವ ತರಬೇತಿಯನ್ನೂ ನೀಡಿದರು.

ಈ ಕಾರ್ಯ ಪ್ರಾರಂಭವಾದಾಗ ಕೇವಲ ಏಳು ಅಥವಾ ಎಂಟು ವಸ್ತುಗಳು ಮಾತ್ರ ಮಾಡಲ್ಪಡುತ್ತಿದ್ದವು. ಆದರೆ ಈಗ ಅಸ್ಸಾಂನಲ್ಲಿ ನಡೆಯುವ ದೊಡ್ಡ ದೊಡ್ಡ ಪ್ರದರ್ಶನಗಳಲ್ಲಿ 20ಕ್ಕೂ ಹೆಚ್ಚಿನ ಪ್ರಕಾರಗಳ ವೈವಿಧ್ಯಮಯ ವಸ್ತುಗಳನ್ನು ಜನರು ನೋಡಬಹುದು. ಹೊಸ ಕಲಾವಿದರ ಹೊಸ ಸೃಜನಶೀಲತೆಯು ಮಿಳಿತವಾಗಿ ಕಲ್ಪನೆಗೂ ಮೀರಿದ ಬಿದಿರಿನ ಅನೇಕ ವಸ್ತುಗಳು ಈಗ ಸಿದ್ಧಗೊಳ್ಳುತ್ತಿವೆ.

ಸೇವಾಭಾರತಿಯು ಅಸ್ಸಾಂನ ಜೋರಹಟ್'ನಲ್ಲಿ ಪಾಂಚಜನ್ಯ ಗುಡಿ ಕೈಗಾರಿಕೆಯ ಮೂಲಕ ಪ್ರತಿಯೊಂದು ಗ್ರಾಮಗಳಿಗೂ ಹೋಗಿ ಬಿದಿರು ಕಲಾ ತರಬೇತಿಗಳನ್ನು ನೀಡುತ್ತಿದೆ. ಅವಿನಾಶ್ ಅವರ ಜೊತೆಯಲ್ಲಿ ನಗೇನ್ ಕಲಿತಾ ಮತ್ತು ರೊಮೇನ್ ಹಜಾರಿಕಾ ಅವರು ಶಿಕ್ಷಕರಾಗಿ ಸಹಯೋಗ ನೀಡಿ ಈ ಕಾರ್ಯದಲ್ಲಿ ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ನಿರ್ವಹಿಸುತ್ತಿದ್ದಾರೆ. ಸರಿಯಾದ ರಸ್ತೆ ಅಥವಾ ವಿದ್ಯುಚ್ಛಕ್ತಿ ಇಲ್ಲದ ಗುಡ್ಡಗಾಡು ಪ್ರದೇಶಗಳಿಗೂ ಹೋಗಿ ಪೂರ್ಣ ವಿಶ್ವಾಸದಿಂದ ಜನರಿಗೆ ಬಿದಿರು ಕಲಾ ಕೌಶಲ್ಯ ತರಬೇತಿಯನ್ನು ನೀಡುವುದು, ಶಿಬಿರಗಳನ್ನು ಮಾಡುವುದು ಒಂದು ಮಹತ್ತರ ಕಾರ್ಯವಾಗಿದೆ.



ಅಲ್ಲಿನ ಜನರಿಗೆ 100 ರೂ. ಸಂಪಾದಿಸಲೂ ಕಷ್ಟವಾಗುತ್ತಿದ್ದ ಸಮಯವೂ ಇತ್ತು. ಈಗ ತಿಂಗಳಿಗೆ 10 ರಿಂದ 15 ಸಾವಿರದವರೆಗೆ ಸಂಪಾದಿಸುತ್ತಿದ್ದಾರೆ.

ಇತ್ತೀಚೆಗೆ ಕೆಲವು ವರ್ಷಗಳಿಂದ ಸತತವಾಗಿ, ಮಾಜುಲಿ ಗೋಲಾಘಾಟ್ ಜಿಲ್ಲೆಯ ಗ್ರಾಮಗಳ ಅನೇಕ ಸ್ಥಳಗಳಿಗೆ ಸೇವಾಭಾರತಿಯ ಕಡೆಯಿಂದ ಹೋಗಿ ಬಿದಿರಿನ ತರಬೇತಿ ಶಿಬಿರಗಳನ್ನು ನಡೆಸಲಾಗುತ್ತಿದೆ. ಅಲ್ಲಿ ಪುರುಷರೊಂದಿಗೆ ನೂರಾರು ಮಹಿಳೆಯರೂ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಇಂದು ಅವರಲ್ಲೇ ಅನೇಕ ಮಹಿಳೆಯರು ತಮ್ಮ ನುರಿತ ಕರಕುಶಲತೆಯಿಂದಾಗಿ ತಿಂಗಳಿಗೆ 10,000 ರೂಪಾಯಿ ಸಂಪಾದಿಸುತ್ತಿದ್ದಾರೆ. ಈ ತರಬೇತಿ ಶಿಬಿರವು ಕೇವಲ ಅವರನ್ನು ಆತ್ಮನಿರ್ಭರರನ್ನಾಗಿ ಮಾಡಿರುವುದಷ್ಟೇ ಅಲ್ಲದೆ ಅವರ ಸ್ವಂತ ವ್ಯಕ್ತಿತ್ವವನ್ನೂ ರೂಪಿಸಿಕೊಳ್ಳಲು ಸಹಾಯ ಮಾಡಿದೆ.

2019ರಿಂದ ಮೇಘಾಲಯದಲ್ಲಿಯೂ ಸೇವಾಭಾರತಿಯ ಬೆತ್ತ ಮತ್ತು ಬ್ಯಾಂಬೂ ಕ್ರಾಫ್ಟ್ ಸಂಸ್ಥೆಯು ಇದೇ ಹಾದಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಬಿದಿರಿನ ಕಲಾತ್ಮಕ ವಸ್ತುಗಳ ತರಬೇತಿಯನ್ನು ನೀಡಲು ನೋನಿಪಾಡ ಗ್ರಾಮದಲ್ಲಿ ಒಂದು ಕೇಂದ್ರವನ್ನು ನಡೆಸಲಾಗುತ್ತಿದೆ. ಅಲ್ಲಿ 250ಕ್ಕೂ ಹೆಚ್ಚಿನವರು ತರಬೇತಿ ಪಡೆದಿರುತ್ತಾರೆ. 15 ಗ್ರಾಮಗಳ ಸುಮಾರು 200 ಕ್ಕೂ ಹೆಚ್ಚಿನ ಕುಟುಂಬಗಳು ಇದರ ಪ್ರಯೋಜನವನ್ನು ಪಡೆಯುತ್ತಿವೆ.


ಬಿದಿರುಕಲೆಯ ಸಂಸ್ಕೃತಿ ಮತ್ತು ಅದರ ಪರಂಪರೆಯನ್ನು ಇಡೀ ವಿಶ್ವಕ್ಕೆ ಪರಿಚಯಿಸುವ, ಬಿದಿರಿನಿಂದ ಮಾಡಿರುವ ಕಲಾತ್ಮಕ ವಸ್ತುಗಳಿಗೆ ಹಾಗೂ ಈ ಚಿಕ್ಕ ಚಿಕ್ಕ ಕೌಶಲ್ಯಗಳಿಗೆ ಗೌರವ ಮತ್ತು ಅದರದೇ ಆದ ಒಂದು ಪ್ರತ್ಯೇಕ ಅಸ್ತಿತ್ವವನ್ನು ನೀಡುವ ದಿಕ್ಕಿನಲ್ಲಿ ನಾವು ಚಿಕ್ಕ ಚಿಕ್ಕ ಗ್ರಾಮಗಳಲ್ಲಿ ಗ್ರಾಮವಾಸಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದೇವೆ. ಇದನ್ನು ಮುಂದೆ ವಿಶ್ವ ಮಟ್ಟದಲ್ಲಿ ಕೊಂಡೊಯ್ಯುವಲ್ಲಿ, ಸೇವಾಭಾರತಿಯ ಮೂಲಕ ಕಾರ್ಯಯೋಜನೆಯು ಜಾರಿಯಲ್ಲಿದೆ.
ಸಂಪರ್ಕ: ಅವಿನಾಶ್ ಹಜಾರಿಕಾ – 7002113491, 9435897848

## ಪುಸ್ತಕ ಪರಿಚಯ

### ಸಾಹಿತ್ಯದ ಸ್ವತ್ವ

**ಲೇಖಕರು:** ನಾರಾಯಣ ಶೇವಿರೆ
**ಪ್ರಕಾಶಕರು:** ಅಯೋಧ್ಯಾ ಪಬ್ಲಿಕೇಶನ್ಸ್
**ಬೆಲೆ:** 180 ರೂ


ತನ್ನತನವನ್ನು ಸೂಚಿಸುವ 'ಸ್ವತ್ವ' ಪದವು ಬಹುತೇಕರಿಗೆ ಅಪರಿಚಿತ. ಸ್ವದೇಶೀ, ಸ್ವಭಾಷಾ, ಸ್ವಭೂಷಾ, ಸ್ವಭಾವ, ಸ್ವಗುಣ ಇತ್ಯಾದಿ ಹಲವು ಪದಗಳ ಪ್ರಾರಂಭದ ಉಪಸರ್ಗವಾಗಿ ಇರುವುದು 'ಸ್ವ'. ನಮ್ಮ ಸಾಹಿತ್ಯದ ಸ್ವತ್ವವನ್ನು ಮರೆತುಬಿಡುವುದೂ ಸಲ್ಲ, ಅದನ್ನು ಹುಡುಕಾಡುವ ನಿಟ್ಟಿನಲ್ಲಿ ಪರಕೀಯ ನೆಲದ ಸಾಹಿತ್ಯದ ಮೊರೆಹೋಗುವುದೂ ಸಲ್ಲ ಮತ್ತು ಇದೇ ನಿಟ್ಟಿನಲ್ಲಿ ನಮ್ಮ ನೆಲದ ನಂಟಿನಿಂದ ಕಳಚಿಕೊಳ್ಳುವುದೂ ಸಲ್ಲ. ಇಲ್ಲಿ, ನಮ್ಮ ಸಾಹಿತ್ಯದ ಸ್ವತ್ವವನ್ನು ಕುರಿತು ಒಂದಿಷ್ಟು ತೊಡಗುವ ಪ್ರಯತ್ನವಿದೆ. ಅದಕ್ಕಾಗಿ; ಅಷ್ಟಿಷ್ಟು ಭಾರತೀಯ ಕಾವ್ಯಮೀಮಾಂಸೆಯನ್ನು ಸ್ಪರ್ಶಿಸಲಾಗಿದೆ. ಪ್ರಾಚೀನ ಕಾವ್ಯಗಳಾದ ರಾಮಾಯಣ ಮಹಾಭಾರತಗಳ ಕೆಲವು ಅಂಶಗಳನ್ನು ಎತ್ತಿಕೊಳ್ಳಲಾಗಿದೆ, ಕನ್ನಡದ ಸಾಹಿತ್ಯ ಪ್ರಪಂಚದೊಳಗೆ ಇನಿತು ಇಣುಕುವ ಯತ್ನಗೈಯಲಾಗಿದೆ. ಸಂಪುಟ ಸಂಪುಟಗಳಲ್ಲಿ ವಿಸ್ತರಿಸಬಹುದಾದ ನೋಟವೊಂದು ಇಲ್ಲಿ ಪುಟ್ಟ ಪುಸ್ತಿಕೆಯಾಗಿ ರೂಪುಪಡೆದಿದೆ. ಪುಸ್ತಕಕ್ಕಾಗಿ ಸಂಪರ್ಕಿಸಿ: 6360581957, 7795827307




## ನಾಗರಿಕ ಶಿಷ್ಟಾಚಾರ

### ಸಾರ್ವಜನಿಕ ಸ್ವತ್ತುಗಳನ್ನು ರಕ್ಷಿಸಬೇಕು

ಪ್ರತಿಯೊಂದು ದೇಶದ ಜನರು ತಮ್ಮ ಸಾರ್ವಜನಿಕ ಆಸ್ತಿಗಳನ್ನು ಹೊಂದಿರುತ್ತಾರೆ. ಉದ್ಯಾನವನಗಳು, ಗ್ರಂಥಾಲಯಗಳು, ಆಸ್ಪತ್ರೆಗಳು, ಬಸ್, ರೈಲು, ವಿಮಾನ ನಿಲ್ದಾಣಗಳು, ಸಾರ್ವಜನಿಕ ಶೌಚಾಲಯಗಳು, ಐತಿಹಾಸಿಕ ಸ್ಥಳಗಳು ಸೇರಿದಂತೆ ಇತ್ಯಾದಿಗಳು ಸರ್ಕಾರದ ಅಡಿಯಲ್ಲಿವೆ. ಈ ಎಲ್ಲಾ ಸಾರ್ವಜನಿಕ ಆಸ್ತಿಗಳನ್ನು ಸಾರ್ವಜನಿಕರ ತೆರಿಗೆಯಿಂದ ನಿರ್ಮಿಸಲಾಗಿದೆ. ಸಾರ್ವಜನಿಕ ಆಸ್ತಿಗಳನ್ನು ನಿರ್ವಹಿಸುವ ಜವಾಬ್ದಾರಿ ಸರ್ಕಾರದ್ದಾಗಿದ್ದರೂ, ಈ ಆಸ್ತಿಗಳನ್ನು ನಿರ್ವಹಿಸುವಲ್ಲಿ ನಾವು, ನಾಗರಿಕರು ಯಾವುದೇ ಪಾತ್ರ ವಹಿಸುವುದಿಲ್ಲ ಎಂದು ಅರ್ಥವಲ್ಲ. ಸಾರ್ವಜನಿಕ ಆಸ್ತಿಗಳನ್ನು ಸರಿಯಾಗಿ ನಿರ್ವಹಿಸುವಲ್ಲಿ ನಾಗರಿಕರ ಕರ್ತವ್ಯ ಹೆಚ್ಚಿದೆ. ಸಾರ್ವಜನಿಕ ಆಸ್ತಿಯನ್ನು ನಾಡಿನ ಸುಧಾರಣೆಗಾಗಿ ನಿರ್ಮಿಸಲಾಗಿರುವುದರಿಂದ ನಮ್ಮ ಹೃದಯದಲ್ಲಿ ಅದರ ಬಗ್ಗೆ ಗೌರವವಿರಬೇಕು. ಕೆಲವು ನಾಗರಿಕರು ಸಾರ್ವಜನಿಕ ಆಸ್ತಿಗಳನ್ನು ಸರಿಯಾಗಿ ಬಳಸುವುದಿಲ್ಲ; ಶೌಚಾಲಯಗಳನ್ನು ಸ್ವಚ್ಛವಾಗಿ ಬಳಸುವುದಿಲ್ಲ, ಉದ್ಯಾನವನಗಳಲ್ಲಿ ಕಸ ಎಸೆಯುತ್ತಾರೆ, ರಸ್ತೆಯಲ್ಲಿ ನಡೆಯುವಾಗ ಉಗುಳುವುದು ಇತ್ಯಾದಿ. ತಮ್ಮ ಸ್ವಂತ ದೇಶದ ಸಾರ್ವಜನಿಕ ಆಸ್ತಿಗಳ ಬಗ್ಗೆ ಗೌರವವಿಲ್ಲದಿರುವುದರ ಜೊತೆಗೆ, ಈ ಕೆಲಸಗಳನ್ನು ಮಾಡುವುದರಿಂದ ಅವರು ಸಾರ್ವಜನಿಕ ಆಸ್ತಿ ಮತ್ತು ಸುತ್ತಮುತ್ತಲಿನ ಪರಿಸರವನ್ನು ಸಹ ಹಾಳು ಮಾಡುತ್ತಿದ್ದಾರೆ. ಕೆಲವು ಗಲಭೆಗಳು ಮತ್ತು ರ್‍ಯಾಲಿಗಳ ಸಮಯದಲ್ಲಿ ಸಾರ್ವಜನಿಕ ಸ್ವತ್ತುಗಳಿಗೆ ಹಾನಿ ಮಾಡಲಾಗುತ್ತದೆ. ಸಾರ್ವಜನಿಕ ಆಸ್ತಿಗಳನ್ನು ನಾಶಮಾಡಲು ಅಥವಾ ಅಜಾಗರೂಕತೆಯಿಂದ ಬಳಸಲು ನಮಗೆ ಯಾವುದೇ ಹಕ್ಕಿಲ್ಲ ಎಂದು ನಾವು ಅರಿತುಕೊಳ್ಳಬೇಕು.



**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯಕೃಷ್ಣ ಹೆಚ್ ವಿ, ರೂಪಶ್ರೀ ಪುರುಷೋತ್ತಮ್, ಸುಲಕ್ಷಣಾ ಶರ್ಮಾ

## ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ ಪೇಶ್ವಾ ಬಾಜಿರಾವ್ ಪ್ರತಿಮೆ ಅನಾವರಣ



ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪುಣೆಯ ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ಆವರಣದಲ್ಲಿ ಪ್ರಸಿದ್ಧ ಮರಾಠಾ ಯೋಧ ಪೇಶ್ವಾ ಬಾಜಿರಾವ್ I ರ ಕುದುರೆ ಸವಾರಿ ಪ್ರತಿಮೆಯನ್ನು ಅನಾವರಣಗೊಳಿಸಿದರು. ಬಾಜಿರಾವ್ ಕೇವಲ 20 ವರ್ಷಗಳಲ್ಲಿ 41 ಯುದ್ಧಗಳನ್ನು ಗೆದ್ದವರು ಮತ್ತು ಹಲವಾರು ಸೋಲಿನ ಹಂತದಲ್ಲಿದ್ದ ಯುದ್ಧಗಳನ್ನು ಯಶಸ್ವಿಯಾಗಿ ವಿಜಯಗಳಾಗಿ ಪರಿವರ್ತಿಸಿದವರು. ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಯ ಭವಿಷ್ಯದ ನಾಯಕರಿಗೆ ತರಬೇತಿ ಮೈದಾನವಾಗಿರುವ ಎನ್‌ಡಿಎ, ಬಾಜಿರಾವ್ ಅವರ ಪ್ರತಿಮೆಗೆ ಅತ್ಯಂತ ಸೂಕ್ತವಾದ ಸ್ಥಳವಾಗಿದೆ ಎಂದು ಅಮಿತ್ ಶಾ ಅಭಿಪ್ರಾಯಪಟ್ಟರು.

## INS ಉದಯಗಿರಿ ಭಾರತೀಯ ನೌಕಾಪಡೆಗೆ ಹಸ್ತಾಂತರ



ಭಾರತದ ಕಡಲ ಭದ್ರತೆ ಮತ್ತು ಸ್ಥಳೀಯ ಹಡಗು ನಿರ್ಮಾಣ ಕೌಶಲ್ಯದ ಅಗಾಧತೆಯನ್ನು ಪ್ರದರ್ಶಿಸುವ ಬೆಳವಣಿಗೆಯಲ್ಲಿ, ಭಾರತೀಯ ನೌಕಾಪಡೆಗೆ ಜುಲೈ 1 ರಂದು ಮುಂಬೈನ ಮಜಗಾಂವ್ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್ (MDL) ಮಹತ್ವಾಕಾಂಕ್ಷೆಯ ಪ್ರಾಜೆಕ್ಟ್ 17A ಅಡಿಯಲ್ಲಿನ ಎರಡನೇ ಸ್ಟೆಲ್ತ್ ಫ್ರಿಗೇಟ್ INS ಉದಯಗಿರಿಯನ್ನು ಹಸ್ತಾಂತರಿಸಿತು. ಆತ್ಮನಿರ್ಭರ ಭಾರತ ಉಪಕ್ರಮದ ಅಡಿಯಲ್ಲಿ ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗುವ ಭಾರತದ ಪ್ರಯತ್ನಗಳಿಗೆ ಈ ಹಸ್ತಾಂತರವು ಒಂದು ಮೈಲಿಗಲ್ಲು ಮತ್ತು ಹಿಂದೂ ಮಹಾಸಾಗರ ಪ್ರದೇಶದಲ್ಲಿ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ಬೆದರಿಕೆಗಳನ್ನು ತಡೆಯಲು ಭಾರತವು ತನ್ನ ನೌಕಾ ಹೆಜ್ಜೆಗುರುತನ್ನು ಹಂತಹಂತವಾಗಿ ಹೆಚ್ಚಿಸುತ್ತಿರುವ ಸಂದರ್ಭದಲ್ಲಿ ಈ ಹಸ್ತಾಂತರ ಮಹತ್ವದ್ದಾಗಿದೆ. ಐಎನ್‌ಎಸ್ ಉದಯಗಿರಿಗೆ ಪ್ರಾಚೀನ ಉದಯಗಿರಿ ಬೆಟ್ಟಗಳ ಹೆಸರಿಡಲಾಗಿದೆ, ಮತ್ತು ಹಿಂದಿನ ಐಎನ್‌ಎಸ್ ಉದಯಗಿರಿಯ ಗೌರವವನ್ನು ವಿಶಿಷ್ಟವಾಗಿ ಮುಂದುವರೆಸಿದೆ, ಇದು ಆಗಸ್ಟ್ 2007 ರಲ್ಲಿ ತನ್ನ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವ ಮೊದಲು 31 ವರ್ಷಗಳ ಕಾಲ ರಾಷ್ಟ್ರಕ್ಕೆ ಸೇವೆ ಸಲ್ಲಿಸಿದ ಉಗಿ ಯುದ್ಧನೌಕೆಯ ಹೆಸರನ್ನೇ ಹೊಂದಿದೆ. ಹೊಸ ಉದಯಗಿರಿಯನ್ನು ಯಾರ್ಡ್ 12652 ಎಂದು ನಿರ್ಮಿಸಲಾಗಿದೆ, ಇದು ಭಾರತೀಯ ನೌಕಾ ವಿನ್ಯಾಸ ಮತ್ತು ತಂತ್ರಜ್ಞಾನದ ಉತ್ತುಂಗವನ್ನು ಸೂಚಿಸುತ್ತದೆ. ಪ್ರಾಜೆಕ್ಟ್ 17 ಎ ಮುಂದಿನ ಪೀಳಿಗೆಯ ರಹಸ್ಯ, ಶಸ್ತ್ರಾಸ್ತ್ರಗಳು ಮತ್ತು ಸಂವೇದಕಗಳನ್ನು ಹೊಂದಿರುವ ಯಶಸ್ವಿ ಭಾರತೀಯ ನೌಕಾಪಡೆಯ ಶಿವಾಲಿಕ್-ವರ್ಗ (ಪ್ರಾಜೆಕ್ಟ್ 17) ಯುದ್ಧನೌಕೆಗಳ ಅನುಸರಣೆಯಾಗಿದೆ. ಹೊಸ ವರ್ಗದ ಯುದ್ಧನೌಕೆಗಳು ನೌಕಾಪಡೆಯ ಯುದ್ಧನೌಕೆ ವಿನ್ಯಾಸ ಬ್ಯೂರೋದಿಂದ ಸ್ವದೇಶಿ-ಬೆಳೆದ ವಿನ್ಯಾಸ ಸಾಮರ್ಥ್ಯಗಳಲ್ಲಿ ಗಮನಾರ್ಹ ಮೈಲಿಗಲ್ಲನ್ನು ಗುರುತಿಸುತ್ತವೆ.

# ಸಾಲುದ್ದದ ಸುದ್ದಿಗಳು

## ನೌಕಾಪಡೆಯ ಫೈಟರ್ ಪೈಲಟ್ ಆಗಿ ತರಬೇತಿ ಪಡೆದ ಮೊದಲ ಮಹಿಳೆ ಆಸ್ತಾ ಪೂನಿಯಾ



ಸಬ್ ಲೆಫ್ಟಿನೆಂಟ್ ಆಸ್ತಾ ಪೂನಿಯಾ ಭಾರತೀಯ ನೌಕಾಪಡೆಯ ಫೈಟರ್ ಪೈಲಟ್ ಆಗಿ ತರಬೇತಿ ಪಡೆದ ಮೊದಲ ಮಹಿಳೆಯಾಗಿದ್ದಾರೆ. ಭಾರತದ ವಿಮಾನವಾಹಕ ನೌಕೆಗಳಿಂದ MiG-29K ಅಥವಾ ರಫೇಲ್ ಫೈಟರ್ ಜೆಟ್‌ನ ನೌಕಾ ಆವೃತ್ತಿಯನ್ನು ಹಾರಿಸಬಲ್ಲ ಸಾಮರ್ಥ್ಯ ಪಡೆದುಕೊಂಡಿದ್ದಾರೆ. ಎರಡನೇ ಮೂಲ ಹಾಕ್ ಕನ್ವರ್ಷನ್ ಕೋರ್ಸ್‌ನ ವಿಂಗ್‌ಗಿಂಗ್ ಅಥವಾ ಪದವಿ ಪ್ರದಾನ ಸಮಾರಂಭದ ನಂತರ ನೌಕಾಪಡೆಯು ಇದನ್ನು ಘೋಷಿಸಿದೆ. ಭಾರತವು 2013 ರಲ್ಲಿ ಸೇರ್ಪಡೆಗೊಂಡ ಹಾಕ್ 132 ಸುಧಾರಿತ ಜೆಟ್ ತರಬೇತುದಾರದಲ್ಲಿ ಮಿಲಿಟರಿ ಪೈಲಟ್‌ಗಳಿಗೆ ತರಬೇತಿ ನೀಡುತ್ತದೆ. ಜುಲೈ 3, 2025 ರಂದು, ಲೆಫ್ಟಿನೆಂಟ್ ಅತುಲ್ ಕುಮಾರ್ ಧುಲ್ ಮತ್ತು ಸಬ್ ಲೆಫ್ಟಿನೆಂಟ್ ಆಸ್ತಾ ಪೂನಿಯಾ ಅವರು ಎಸಿಎನ್‌ಎಸ್ (ವಾಯು) ನ ರಿಯರ್ ಅಡ್ಮಿರಲ್ ಜನಕ್ ಬೆವ್ಲಿ ಅವರಿಂದ ಪ್ರತಿಷ್ಠಿತ 'ವಿಂಗ್ಸ್ ಆಫ್ ಗೋಲ್ಡ್' ಅನ್ನು ಪಡೆದರು. ಸಬ್ ಲೆಫ್ಟಿನೆಂಟ್ ಆಸ್ತಾ ಪೂನಿಯಾ ನೌಕಾ ವಾಯುಯಾನದ ಫೈಟರ್ ಸ್ಟ್ರೀಮ್‌ನಲ್ಲಿ ಮೊದಲ ಮಹಿಳೆಯಾಗಿದ್ದಾರೆ, ಅಡೆತಡೆಗಳನ್ನು ಮುರಿದು ನೌಕಾಪಡೆಯಲ್ಲಿ ಮಹಿಳಾ ಫೈಟರ್ ಪೈಲಟ್‌ಗಳ ಹೊಸ ಯುಗಕ್ಕೆ ದಾರಿ ಮಾಡಿಕೊಟ್ಟಿದ್ದಾರೆ" ಎಂದು ನೌಕಾಪಡೆಯು ಹೇಳಿಕೆ ತಿಳಿಸಿದೆ.

## ದೇಶಾದ್ಯಂತ ಶಾಲೆಗಳಿಗೆ 10 ಲಕ್ಷ ಫುಟ್‌ಬಾಲ್‌ಗಳನ್ನು ವಿತರಿಸಲು ಮುಂದಾದ ಕೇಂದ್ರ

ದೇಶಾದ್ಯಂತ ಶಾಲೆಗಳಿಗೆ ಸುಮಾರು 10 ಲಕ್ಷ ಫುಟ್‌ಬಾಲ್‌ಗಳನ್ನು ವಿತರಿಸಲು ಕೇಂದ್ರ ಮುಂದಾಗಿದೆ, ಇದರಿಂದ ಫುಟ್‌ಬಾಲ್‌ನಲ್ಲಿ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಮತ್ತು ವಿದ್ಯಾರ್ಥಿಗಳಲ್ಲಿ ಬಲವಾದ ಕ್ರೀಡಾ ಸಂಸ್ಕೃತಿಯನ್ನು ಬೆಳೆಸಲು ಸಹಾಯವಾಗಲಿದೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಕೋಲ್ಕತಾದ ಫೋರ್ಟ್ ವಿಲಿಯಂನ ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ಫಿಫಾ ಫುಟ್‌ಬಾಲ್‌ಗಳ ವಿತರಣೆಯನ್ನು ಉದ್ಘಾಟಿಸುವ ಸಂದರ್ಭದಲ್ಲಿ ಈ ಘೋಷಣೆ ಮಾಡಿದರು.ದೇಶಾದ್ಯಂತ ಶಾಲೆಗಳಿಗೆ ಸುಮಾರು 10 ಲಕ್ಷ ಫುಟ್‌ಬಾಲ್‌ಗಳನ್ನು ವಿತರಿಸಲಾಗುವುದು ಎಂದು ಅವರು ತಿಳಿಸಿದರು. ಫಿಫಾ (Fédération Internationale Football Association) ನೇತೃತ್ವದಲ್ಲಿ ನಡೆಯುವ ಫುಟ್‌ಬಾಲ್ ಫಾರ್ ಸ್ಕೂಲ್ಸ್ (F4S) ಕಾರ್ಯಕ್ರಮವು, ಶಾಲಾ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಫುಟ್‌ಬಾಲ್ ಅನ್ನು ಹೆಚ್ಚು ಸುಲಭವಾಗಿ ಒದಗಿಸುವ ಮೂಲಕ ಮೂಲಮಟ್ಟದಲ್ಲಿ ಫುಟ್‌ಬಾಲ್ ಅನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ.

## 4,878 ಸಾವಿರ ಕೋಟಿ ರೂ ತಲುಪಿದೆ ಕೃಷಿ ಕ್ಷೇತ್ರ

ಭಾರತೀಯ ಕೃಷಿ ಕ್ಷೇತ್ರದ ಆದಾಯವು ಕಳೆದ 12 ವರ್ಷಗಳಲ್ಲಿ ಶೇಕಡಾ 225ರಷ್ಟು ಬೆಳವಣಿಗೆ ಕಂಡು, 4,878 ಸಾವಿರ ಕೋಟಿ ರೂಪಾಯಿಗಳಷ್ಟು ತಲುಪಿದೆ ಎಂದು ಹೊಸದಾಗಿ ಬಿಡುಗಡೆಯಾದ ರಾಷ್ಟ್ರೀಯ ಅಂಕಿಅಂಶ ಕಚೇರಿ ವರದಿ ಹೇಳಿದೆ. ಈ ಯಶಸ್ಸಿನ ಹಿಂದೆ ಸುಧಾರಿತ ಕೃಷಿ ತಂತ್ರಜ್ಞಾನಗಳು, ಸರ್ಕಾರದ ಬೆಂಬಲ ನೀತಿಗಳು, ಮತ್ತು ರೈತರ ಶ್ರಮದಾನದ ಪಾತ್ರವಿದೆ. ಈ ಬೆಳವಣಿಗೆಯು ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸಿದ್ದು, ಆಹಾರ ಭದ್ರತೆ ಮತ್ತು ಕೃಷಿ ರಫ್ತಿನಲ್ಲಿ ಭಾರತದ ಸ್ಥಾನವನ್ನು ಗಟ್ಟಿಗೊಳಿಸಿದೆ. ಈ ವಿವರವಾದ ವರದಿಯು ರೈತರ ಬೆವರಿನಿಂದ ಬೇರೂರಿರುವ ಪ್ರಗತಿಯ ಕಥೆಯನ್ನು ಮತ್ತು ವೇಗವಾಗಿ ಬದಲಾಗುತ್ತಿರುವ ಜಗತ್ತಿಗೆ ಹೊಂದಿಕೊಳ್ಳುವ ಗ್ರಾಮೀಣ ಸಮುದಾಯಗಳ ಧೈರ್ಯವನ್ನು ಹೇಳುತ್ತದೆ. ಇದು ಭಾರತದ ಹೊಲಗಳು, ಕೃಷಿಭೂಮಿಗಳು ಮತ್ತು ಮೀನುಗಾರಿಕೆಯ ನಾಡಿಮಿಡಿತವನ್ನು ಸೆರೆಹಿಡಿಯುತ್ತದೆ, ಕೃಷಿಯು ದೇಶದ ಆರ್ಥಿಕತೆ, ಸಂಸ್ಕೃತಿ ಮತ್ತು ಪೋಷಣೆಯ ಮೂಲಾಧಾರವಾಗಿ ಹೇಗೆ ಉಳಿದಿದೆ ಎಂಬುದನ್ನು ತೋರಿಸುತ್ತದೆ.

# ಜಗತ್ತು ಗುರುತಿಸುವ ಹಾಗೆ ಬೆಳೆದ ಆಂಧ್ರಪ್ರದೇಶದ 23 ವರ್ಷದ ಯುವತಿ ಜಾಹ್ನವಿ

ಆಂಧ್ರಪ್ರದೇಶದ ಪಾಲಕೊಲ್ಲುವಿನಿಂದ ಭೂಮಿಯ ಆರ್ಬಿಟ್‌ನವರೆಗೆ ಜಾಹ್ನವಿ ದಂಗೇಟಿ ಎಂಬ 23 ವರ್ಷದ ಯುವತಿ ತನ್ನ ಆದರ್ಶಮಯ ಪಯಣವನ್ನು ಬೆಳೆಸಿದ್ದಾರೆ. ಬಾಲ್ಯದಲ್ಲಿ ಕಂಡ ಕನಸನ್ನು ನನಸು ಮಾಡಿಯೇ ಬಿಟ್ಟ ಧೀರಳೀಕೆ. ನಾಸಾದ ಪ್ರತಿಷ್ಠಿತ ಅಂತರರಾಷ್ಟ್ರೀಯ ವಾಯು ಮತ್ತು ಬಾಹ್ಯಾಕಾಶ ಕಾರ್ಯಕ್ರಮವನ್ನು ಪೂರ್ಣಗೊಳಿಸಿದ ಮೊದಲ ಭಾರತೀಯಳೆನಿಸುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ.

2029ರಲ್ಲಿ ಅವಳು ಬಾಹ್ಯಾಕಾಶಕ್ಕೆ ಹಾರಲಿದ್ದಾಳೆ. ಜಾಹ್ನವಿಯ ಪ್ರಯಾಣವು ಪಶ್ಚಿಮ ಗೋದಾವರಿಯ ಸಣ್ಣ ಪಟ್ಟಣದಲ್ಲಿ ಪ್ರಾರಂಭವಾಯಿತು. ಆ ಪುಟ್ಟ ಹುಡುಗಿಯ ಅಪ್ಪ ಅಮ್ಮ ಕೆಲಸದ ನಿಮಿತ್ತ ಕುವೈತ್ನಲ್ಲಿ ವಾಸಿಸುತ್ತಿದ್ದ ಕಾರಣ ಆಕೆ ತನ್ನ ಅಜ್ಜಿಯ ಜೊತೆಗೆ ಬೆಳೆದವಳು. ಸಣ್ಣ ವಯಸ್ಸಿನಲ್ಲಿ ಆಕೆಯ ಅಜ್ಜಿ ಹೇಳಿದ ಚಂದಮಾಮನ ಕಥೆಗಳೇ ಆಕೆಗೆ ಪ್ರೇರಣೆ. ಚಿಕ್ಕವಳಿದ್ದಾಗ ಆಕೆ ಚಂದ್ರ ತನ್ನನ್ನು ಹಿಂಬಾಲಿಸುತ್ತಾ ಇದ್ದಾನೆ ಅಂತ ಭಾವಿಸಿದಳಂತೆ. ಅವಳ ಅಜ್ಜಿಯು ಕೂಡ ಅವಳಿಗೆ ಹೌದು ಚಂದ್ರ ನಿನ್ನನ್ನು ಹಿಂಬಾಲಿಸುತ್ತಿದ್ದಾನೆ. ನೀನು ಅಲ್ಲಿಗೆ ಹೋಗಬೇಕಂತೆ ಎನ್ನುವ ಮೂಲಕ ಅವಳ ಕನಸಿಗೆ ಮತ್ತಷ್ಟು ರಂಗು ನೀಡಿದ್ದರು. ಅದನ್ನೇ ತನ್ನ ಗುರಿಯಾಗಿಸಿಕೊಂಡ ಆಕೆ ಮುಂದೊಂದು ದಿನ ತಾನು ಬಾಹ್ಯಾಕಾಶದತ್ತ ಹಾರಬೇಕೆಂದು ದೃಢನಿಶ್ಚಯ ಮಾಡಿದ್ದರು. ಸುಮ್ಮನೆ ಕನಸು ಕಾಣುತ್ತ ಕೂತರೆ ಸಾಲದು ಎಂದು ನನಸು ಮಾಡೋದು ಹೇಗೆಂದು ಒಂದೊಂದೇ ದಾರಿಗಳನ್ನು ಹುಡುಕುತ್ತಾ ಹೋದ ಆಕೆಗೆ ಹಲವಾರು ಅವಕಾಶಗಳು ಸಿಗುತ್ತಾ ಹೋದವು. ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಂಡ ಈಕೆಯ ಹೆಸರು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲೂ ಇದೆ. ತನ್ನ ಕನಸಿಗೆ ಪೂರಕವಾಗಿ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾನಿಲಯದಿಂದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ಸ್ ಇಂಜಿನಿಯರಿಂಗ್‌ನಲ್ಲಿ ಪದವಿ ಮತ್ತು ಬಾಹ್ಯಾಕಾಶ ಪರಿಶೋಧನೆಯ ಬಗ್ಗೆ ಆಳವಾದ ಉತ್ಸಾಹದಿಂದ ಜ್ಞಾನವನ್ನ ಪಡೆದುಕೊಂಡು ತನ್ನ ಕನಸಿನ ಹಾದಿಯನ್ನು ಸುಗಮಗೊಳಿಸಿಕೊಂಡರು ಜಾಹ್ನವಿ. ಈಗ ಅವರು ಅಧಿಕೃತವಾಗಿ ಟೈಟಾನ್ ಆರ್ಬಿಟಲ್ ಪೋರ್ಟ್ ಬಾಹ್ಯಾಕಾಶ ನಿಲ್ದಾಣವನ್ನು ನಿರ್ಮಿಸುತ್ತಿರುವ ಯುಎಸ್ ಬಾಹ್ಯಾಕಾಶ ಕಂಪೆನಿಯಾದ ಟೈಟಾನ್ ಸ್ಪೇಸ್‌ಗೆ ಗಗನ ಯಾತ್ರೆ ಅಭ್ಯರ್ಥಿಯಾಗಿದ್ದಾರೆ.






'ಪ್ರತಿಯೊಬ್ಬರೂ ಒಂದು ಗುರಿಯನ್ನು ಇಟ್ಟುಕೊಳ್ಳಬೇಕು. ಅದು ಸರಳವಾಗಿರಬಹುದು ಅಥವಾ ಕಠಿಣವಾಗಿರಬಹುದು. ಅದಕ್ಕಾಗಿ ಕಷ್ಟಪಟ್ಟು ಕೆಲಸ ಮಾಡಬೇಕು. ಚುರುಕಾಗಿ ಕೆಲಸ ಮಾಡಬೇಕು. ನಿಮ್ಮ ಸಮಯವವನ್ನು ವ್ಯರ್ಥ ಮಾಡಬೇಡಿ, ನೀವು ಸಾಧಿಸಲು ಬಯಸುವ ನಿಮ್ಮ ಗುರಿಗಾಗಿ ನಿಮ್ಮ ಸಮಯವನ್ನು ಹೂಡಿಕೆ ಮಾಡಿ"
**– ಜಾಹ್ನವಿ**

ಆಕೆ 2029ರಲ್ಲಿ ಭೂಮಿಯನ್ನು ಪರಿಭ್ರಮಿಸುವ ಉದ್ಘಾಟನಾ ಕಾರ್ಯಾಚರಣೆಯ ಭಾಗವಾಗಿರುತ್ತಾರೆ. ಐದು ಗಂಟೆಗಳ ಈ ಹಾರಾಟದಲ್ಲಿ ಮೂರು ಗಂಟೆಗಳ ಕಾಲ ಶೂನ್ಯ ಗುರುತ್ವಾಕರ್ಷಣೆ ಇರಲಿದೆ. ಇದು ಎರಡು ಬಾರಿ ಭೂಮಿಯನ್ನು ಪರಿಭ್ರಮಿಸುತ್ತದೆ ಮತ್ತು ಎರಡು ಬಾರಿ ಮನಸ್ಸಿಗೆ ಮುದ ನೀಡುವ ಸೂರ್ಯೋದಯಗಳು ಮತ್ತು ಸೂರ್ಯಾಸ್ತಗಳನ್ನು ಕಣ್ತುಂಬಿಕೊಳ್ಳಲು ಸಾಧ್ಯವಾಗಲಿದೆ. ನಾಸಾದ ಅನುಭವಿ ನಿವೃತ್ತ ಯುಎಸ್‌ಎಸ್ ಸೇನಾ ಕರ್ನಲ್ ಮತ್ತು ಮಾಜಿ ಗಗನಯಾತ್ರಿ ವಿಲಿಯಂ ಮೆಕಾರ್ಥರ್ ಜೂನಿಯರ್ ಅವರ ನೇತೃತ್ವದಲ್ಲಿ ಜಾಹ್ನವಿ ನಭಕ್ಕೆ ಹಾರಲಿದ್ದಾರೆ. ಅಂದಹಾಗೆ ಅವಳು ಗಗನಕ್ಕೆ ಹಾರುವ ಮೊದಲು ಕಠಿಣ ತರಬೇತಿ ಪಡೆಯಬೇಕಿದೆ. 2026 ರಿಂದ ಆರಂಭಗೊಂಡು ಜಾಹ್ನವಿ ನಿವೃತ್ತ ನಾಸಾ ಗಗನಯಾತ್ರಿ ಕರ್ನಲ್ ವಿಲಿಯಂ ಜೂನಿಯರ್ ಅವರ ಮಾರ್ಗದರ್ಶನದಲ್ಲಿ ಗಗನ ಯಾತ್ರೆಯ ತರಬೇತಿಯನ್ನು ಪಡೆಯಲಿದ್ದಾರೆ. ಅವರ ಪೂರ್ವ ಸಿದ್ಧತಾ ಕಾರ್ಯಗಳು ಬಾಹ್ಯಾಕಾಶ ನೌಕೆ ವ್ಯವಸ್ಥೆಗಳ ತರಬೇತಿ, ಶೂನ್ಯ-ಗುರುತ್ವಾಕರ್ಷಣೆಯ ಯಾನಗಳು, ಬದುಕುಳಿಯುವ ಅಂದರೆ ಸರ್ವೈವಲ್ ಡ್ರಿಲ್‌ಗಳು, ದೈಹಿಕ ಮತ್ತು ಮಾನಸಿಕ ಕಂಡಿಶನಿಂಗ್ ಒಳಗೊಂಡಿರುತ್ತವೆ. ಹಾಗಂತ ಜಾಹ್ನವಿ ಈ ಬಾಹ್ಯಕಾಶ ಯಾನ ತರಬೇತಿಗಳು ಅಥವಾ ಪುರಸ್ಕಾರಗಳಿಗೆ ಹೊಸಬಳಲ್ಲ. ಕೇವಲ 23 ವರ್ಷ ವಯಸ್ಸಿನಲ್ಲಿ ಆಕೆ ಈಗಾಗಲೇ ಸಾಧನೆಗಳ ಸುದೀರ್ಘ ಪಟ್ಟಿಯನ್ನು ಹೊಂದಿದ್ದಾಳೆ.

ನಾಸಾದ ಅಂತರರಾಷ್ಟ್ರೀಯ ವಾಯು ಮತ್ತು ಬಾಹ್ಯಾಕಾಶ ಕಾರ್ಯಕ್ರಮವನ್ನು ಪೂರ್ಣಗೊಳಿಸಿದ ಮೊದಲ ಭಾರತೀಯಳು, ನಾಸಾದ ಬಾಹ್ಯಾಕಾಶ ಅಪ್ಲಿಕೇಶನ್‌ಗಳ ಸವಾಲಿನಲ್ಲಿ ಪೀಪಲ್ಸ್ ಚಾಯ್ಸ್ ಪ್ರಶಸ್ತಿ ವಿಜೇತೆ, 'ವಿಶ್ವಬಾಹ್ಯಾಕಾಶ ವಾರ' ಕಾರ್ಯಕ್ರಮದಲ್ಲಿ ಇಸ್ರೋದಿಂದ ಯುವ ಸಾಧಕ ಪ್ರಶಸ್ತಿ, NITಗಳು ಮತ್ತು ಇಸ್ರೋ ಕಾರ್ಯಕ್ರಮಗಳಲ್ಲಿ ಮಾತನಾಡಿದ STEM ಶಿಕ್ಷಣ ತಜ್ಞೆ ಎಂಬ ಗೌರವ, ಹೊಸ ಕ್ಷುದ್ರಗ್ರಹದ ಆವಿಷ್ಕಾರಕ್ಕೆ ಕೊಡುಗೆ, ಕಿರಿಯ ವಿದೇಶಿ ಅನಲಾಗ್ ಗಗನಯಾತ್ರಿ ಎಂಬ ಹೆಗ್ಗಳಿಕೆ, ಬಾಹ್ಯಾಕಾಶ ಐಸ್‌ಲ್ಯಾಂಡ್‌ನ ಭೂವಿಜ್ಞಾನ ತರಬೇತಿಗೆ ಆಯ್ಕೆಯಾದ ಮೊದಲ ಭಾರತೀಯಳು ಎಂಬ ಹೆಗ್ಗಳಿಕೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.vskkarnataka.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th JULY 2025
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-07-2025



## ಅಯೋಧ್ಯೆ ರಾಮ ಮಂದಿರಕ್ಕೆ ಇದುವರೆಗೆ 5.5 ಕೋಟಿಗೂ ಅಧಿಕ ಭಕ್ತರ ಆಗಮನ



ಜನವರಿ 22, 2024 ರಂದು ಅಯೋಧ್ಯೆಯಲ್ಲಿ ಹೊಸದಾಗಿ ನಿರ್ಮಿಸಲಾದ ರಾಮ ಮಂದಿರದ ಲೋಕಾರ್ಪಣೆಯಾದ ಬಳಿಕ, ಭಾರತ ಮತ್ತು ವಿದೇಶಗಳಿಂದ ಅಪಾರ ಭಕ್ತರ ದಂಡು ಇಲ್ಲಿಗೆ ಆಗಮಿಸುತ್ತಲೇ ಇದೆ. 5.5 ಕೋಟಿಗೂ ಹೆಚ್ಚು ಸಂದರ್ಶಕರು ದೇವಾಲಯಕ್ಕೆ ಆಗಮಿಸಿದ್ದಾರೆ ಎಂದು ಉತ್ತರ ಪ್ರದೇಶ ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ. ಯಾತ್ರಿಕರ ಸಂಖ್ಯೆಯಲ್ಲಿನ ಹೆಚ್ಚಳವು ಸಾರ್ವಜನಿಕರಿಗೆ ಮಾತ್ರ ಸೀಮಿತವಾಗಿಲ್ಲ. ಕೇಂದ್ರ ಸಚಿವರು, ರಾಜ್ಯಪಾಲರು, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಮನರಂಜನೆ, ವ್ಯಾಪಾರ ಮತ್ತು ಕ್ರೀಡಾ ಕ್ಷೇತ್ರಗಳ ಪ್ರಮುಖ ವ್ಯಕ್ತಿಗಳು ಸೇರಿದಂತೆ ಸುಮಾರು 4.5 ಲಕ್ಷ ಗಣ್ಯರು ಸಹ ದೇವಾಲಯದಲ್ಲಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಅಯೋಧ್ಯೆಯಲ್ಲಿ ದೇವರ ದರ್ಶನದ ವ್ಯವಸ್ಥೆಗಳು ಪರಿಣಾಮಕಾರಿ ಮತ್ತು ಅನುಕೂಲಕರವಾಗಿವೆ ಎಂದು ನಿರಂತರವಾಗಿ ಖಚಿತಪಡಿಸಿಕೊಳ್ಳುತ್ತಿದ್ದಾರೆ. ಸಾಮಾನ್ಯ ಭಕ್ತರಾಗಲಿ ಅಥವಾ ವಿಶೇಷ ಅತಿಥಿಗಳಾಗಲಿ ಎಲ್ಲಾ ಸಂದರ್ಶಕರು ಸುಗಮ ಭೇಟಿಯನ್ನು ಪಡೆಯುವಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಭವ್ಯ ದೇವಾಲಯದ ಪೂರ್ಣಗೊಂಡ ನಂತರ, ಅಯೋಧ್ಯೆಯು ಪ್ರಮುಖ ಜಾಗತಿಕ ಧಾರ್ಮಿಕ ತಾಣವಾಗಿದೆ. ಹೆಚ್ಚುತ್ತಿರುವ ಬೇಡಿಕೆಗೆ ಅನುಗುಣವಾಗಿ, ರಾಜ್ಯ ಸರ್ಕಾರವು ಸಾರ್ವಜನಿಕ ಸಾರಿಗೆ ಸಂಪರ್ಕವನ್ನು ಹೆಚ್ಚಿಸುವ ಕೆಲಸ ಮಾಡಿದೆ, ಯಾತ್ರಿಕರು ಮತ್ತು ಪ್ರವಾಸಿಗರಿಗೆ ಸುಲಭ ಪ್ರವೇಶವನ್ನು ಸುಗಮಗೊಳಿಸುತ್ತದೆ. ಹಲವಾರು ಅಂತರರಾಷ್ಟ್ರೀಯ ಗಣ್ಯರು ಭಾಗವಹಿಸಿದ್ದ ದೇವಾಲಯದ ಉದ್ಘಾಟನಾ ಸಮಾರಂಭವು ನಗರದ ರೂಪಾಂತರದಲ್ಲಿ ಹೊಸ ಅಧ್ಯಾಯದ ಆರಂಭವನ್ನು ಗುರುತಿಸಿದೆ.

## ವನ್ಯಜೀವಿ ಸಂರಕ್ಷಣಾ ಕ್ಷೇತ್ರದಲ್ಲಿ ಜಾಗತಿಕ ನೇತೃತ್ವ ವಹಿಸುತ್ತಿದೆ ಭಾರತ

ಡೆಹ್ರಾಡೂನ್‌ನ ಭಾರತೀಯ ವನ್ಯಜೀವಿ ಸಂಸ್ಥೆಯಲ್ಲಿ ನಡೆದ ಭಾರತೀಯ ಸಂರಕ್ಷಣಾ ಸಮ್ಮೇಳನ 2025 ಅನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್, 2014 ರಲ್ಲಿ ಭಾರತದಲ್ಲಿ 47 ಹುಲಿ ಮೀಸಲುಗಳಿದ್ದು, ಅವು ಈಗ 58ಕ್ಕೆ ಏರಿವೆ. ಭಾರತವು ಪರಿಸರ ಮತ್ತು ವನ್ಯಜೀವಿ ಸಂರಕ್ಷಣಾ ಕ್ಷೇತ್ರದಲ್ಲಿ ಜಾಗತಿಕವಾಗಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಹೇಳಿದರು. ಸಾಂಪ್ರದಾಯಿಕ ಸಂರಕ್ಷಣಾ ಜ್ಞಾನವನ್ನು ವೈಜ್ಞಾನಿಕವಾಗಿ ದಾಖಲಿಸುವ ಮತ್ತು ಬಳಸಿಕೊಳ್ಳುವ ಅಗತ್ಯವನ್ನು ಕೇಂದ್ರ ಸಚಿವರು ಒತ್ತಿ ಹೇಳಿದರು. ಸಾಂಪ್ರದಾಯಿಕ ವಿಧಾನಗಳಿಂದ ಮುಂದುವರಿಯುತ್ತಾ, ವಿಜ್ಞಾನ, ತಂತ್ರಜ್ಞಾನ ಮತ್ತು ಸಹಾನುಭೂತಿಯನ್ನು ಸಂರಕ್ಷಣೆಯ ಕೇಂದ್ರದಲ್ಲಿ ಇರಿಸಲು ಅವರು ಯುವಕರಿಗೆ ಮನವಿ ಮಾಡಿದರು. ಈ ಮೂರು ದಿನಗಳ ಭಾರತೀಯ ಸಂರಕ್ಷಣಾ ಸಮ್ಮೇಳನವು ಜೂನ್ 27 ರವರೆಗೆ ಮುಂದುವರಿಯಲಿದ್ದು, ದೇಶಾದ್ಯಂತ ಮತ್ತು ವಿದೇಶಗಳಿಂದ ನೂರಾರು ವಿದ್ಯಾರ್ಥಿಗಳು, ಸಂಶೋಧಕರು, ಅರಣ್ಯ ಅಧಿಕಾರಿಗಳು ಮತ್ತು ಸಂರಕ್ಷಣಾ ತಜ್ಞರು ಭಾಗವಹಿಸುತ್ತಿದ್ದಾರೆ ಎಂಬುದನ್ನು ನೆನಪಿಸಿಕೊಳ್ಳಬಹುದು.

## ಸಂಗಮ ಜಲ, ರಾಮ ಮಂದಿರದ ಪ್ರತಿಕೃತಿ: ಟ್ರಿನಿಡಾಡ್ & ಟೊಬಾಗೋ ಪ್ರಧಾನಿಗೆ ಮೋದಿ ಉಡುಗೊರೆ

ಪ್ರಧಾನಿ ನರೇಂದ್ರ ಮೋದಿ ಅವರು ಟ್ರಿನಿಡಾಡ್ ಆಂಡ್ ಟೊಬಾಗೋದ ಪ್ರಧಾನಿ ಕಮಲಾ ಪ್ರಸಾದ್–ಬಿಸ್ಸೆಸ್ಸರ್ ಅವರಿಗೆ ಮಹಾಕುಂಭದಿಂದ ಸಂಗಮದ ಪವಿತ್ರ ನೀರು ಮತ್ತು ಸರಯು ನದಿಯ ಪ್ರತಿಕೃತಿಯನ್ನು ಉಡುಗೊರೆಯಾಗಿ ನೀಡಿದರು. ಟ್ರಿನಿಡಾಡ್ ಆಂಡ್ ಟೊಬಾಗೋದಲ್ಲಿ ಭಾರತೀಯ ಸಮುದಾಯವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಬಿಹಾರದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಒತ್ತಿ ಹೇಳಿದರು, ಭಾರತೀಯ ಸಮುದಾಯದ ಧೈರ್ಯವನ್ನು ಶ್ಲಾಘಿಸಿದರು ಮತ್ತು ಪ್ರಧಾನಿ ಕಮಲಾ ಪ್ರಸಾದ್–ಬಿಸ್ಸೆಸ್ಸರ್ ಅವರನ್ನು "ಬಿಹಾರದ ಮಗಳು" ಎಂದು ಕರೆದರು ಮತ್ತು ಕೆರಿಬಿಯನ್ ರಾಷ್ಟ್ರದ ಗಂಗಾ ಧಾರಾಕ್ಕೆ ಸರಯು ಮತ್ತು ಮಹಾಕುಂಭದಿಂದ ನೀರನ್ನು ನೀಡಬೇಕೆಂದು ವಿನಂತಿಸಿದರು. ಟ್ರಿನಿಡಾಡ್ ಆಂಡ್ ಟೊಬಾಗೋ ಪ್ರಧಾನಿ ಕಮಲಾ ಪ್ರಸಾದ್–ಬಿಸ್ಸೆಸ್ಸರ್ ಅವರ ಪೂರ್ವಜರು ಬಿಹಾರದ ಬಕ್ಸಾರ್‌ನಲ್ಲಿ ವಾಸಿಸುತ್ತಿದ್ದರು. ಕಮಲಾ ಅವರು ಸ್ವತಃ ಅಲ್ಲಿಗೆ ಭೇಟಿ ನೀಡಿದ್ದಾರೆ. ಜನರು ಅವರನ್ನು ಬಿಹಾರದ ಮಗಳು ಎಂದು ಪರಿಗಣಿಸುತ್ತಾರೆ ಎಂದು ಪ್ರಧಾನಿ ಮೋದಿ ಹೇಳಿದರು. ಈ ವರ್ಷದ ಆರಂಭದಲ್ಲಿ ವಿಶ್ವದ ಅತಿದೊಡ್ಡ ಆಧ್ಯಾತ್ಮಿಕ ಸಭೆಯಾದ ಮಹಾಕುಂಭ ನಡೆದಿದ್ದು ನಿಮಗೆಲ್ಲರಿಗೂ ತಿಳಿದಿದೆ. ಮಹಾಕುಂಭದ ನೀರನ್ನು ನನ್ನೊಂದಿಗೆ ಕೊಂಡೊಯ್ಯುವ ಗೌರವ ನನಗಿದೆ. ಸರಯು ನದಿ ಮತ್ತು ಮಹಾಕುಂಭದ ಪವಿತ್ರ ನೀರನ್ನು ಇಲ್ಲಿನ ಗಂಗಾ ಧಾರೆಗೆ ಅರ್ಪಿಸಲು ಕಮಲಾ ಅವರು ಅವರನ್ನು ನಾನು ವಿನಂತಿಸುತ್ತೇನೆ ಎಂದು ಅವರು ಹೇಳಿದರು.



## ಪಾಕಿಸ್ಥಾನದ ಎಲ್ಲಾ X ಖಾತೆಗಳಿಗೆ ಮತ್ತೊಮ್ಮೆ ನಿರ್ಬಂಧ ಹೇರಿದ ಭಾರತ

ಕಳೆದ ಕೆಲವು ದಿನಗಳಿಂದ ಲಭ್ಯವಿದ್ದ ಎಲ್ಲಾ ಪಾಕಿಸ್ತಾನಿ ಎಕ್ಸ್ ಖಾತೆಗಳನ್ನು ಭಾರತದಲ್ಲಿ ಮತ್ತೆ ನಿರ್ಬಂಧಿಸಲಾಗಿದೆ ಎಂದು ಅಧಿಕೃತ ಮೂಲಗಳು ದೃಢಪಡಿಸಿವೆ. ಏಪ್ರಿಲ್ 22 ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಪಾಕಿಸ್ತಾನ ಮೂಲದ ಲಷ್ಕರ್–ಎ–ತೈಬಾದ ಪ್ರಾಕ್ಸಿ, ದಿ ರೆಸಿಸ್ಟೆನ್ಸ್ ಫ್ರಂಟ್‌ಗೆ ಸೇರಿದ ಭಯೋತ್ಪಾದಕರು 26 ಪ್ರವಾಸಿಗರನ್ನು ಕೊಂದ ನಂತರ ಪಾಕಿಸ್ತಾನದ ವಿರುದ್ಧ ಭಾರತವು ಡಿಜಿಟಲ್ ಮತ್ತು ರಾಜತಾಂತ್ರಿಕ ನಿರ್ಬಂಧಗಳನ್ನು ಹಾಕುತ್ತಿದೆ. ಈ ನಿರ್ಬಂಧವು ಕೆಲವು ದಿನಗಳಿಂದ ತಾತ್ಕಾಲಿಕವಾಗಿ ತೆರವುಗೊಂಡಿದ್ದರೂ, ಇಂದು ಮತ್ತೆ ಎಲ್ಲಾ ಪಾಕಿಸ್ತಾನಿ X ಖಾತೆಗಳ ಮೇಲೆ ಮತ್ತೆ ನಿಷೇಧವನ್ನು ಜಾರಿಗೊಳಿಸಲಾಗಿದೆ. ಜೊತೆಗೆ, ಡಾನ್ ನ್ಯೂಸ್, ಸಮಾ ಟಿವಿ, ARY ನ್ಯೂಸ್, ಜಿಯೋ ನ್ಯೂಸ್ ಸೇರಿದಂತೆ 16 ಪಾಕಿಸ್ತಾನಿ ಯೂಟ್ಯೂಬ್ ಚಾನೆಲ್‌ಗಳ ಮೇಲಿನ ನಿಷೇಧವನ್ನು ಮುಂದುವರೆಸಲಾಗಿದೆ. ತಪ್ಪು ಮತ್ತು ಉದ್ವಿಗ್ನತೆಗೆ ಕಾರಣವಾಗುವ ವಿಷಯವನ್ನು ಹರಡುವುದರಿಂದ ಇವುಗಳ ಮೇಲೆ ನಿರ್ಬಂಧ ಮುಂದುವರೆದಿದೆ. ಕೆಲವು ಪಾಕಿಸ್ತಾನಿ ಕ್ರಿಕೆಟಿಗರಾದ ಶೋಯೆಬ್ ಅಖ್ತರ್, ಬಾಸಿತ್ ಅಲಿ ಮತ್ತು ರಶೀದ್ ಲತೀಫ್ ಅವರ ಯೂಟ್ಯೂಬ್ ಚಾನೆಲ್‌ಗಳು ಮತ್ತು ಪಾಕಿಸ್ತಾನಿ ನಟಿಯರಾದ ಮಾವ್ರಾ ಹೊಕೇನ್ ಮತ್ತು ಸಬಾ ಕಮರ್ ಅವರ ಇನ್ಸ್ಟಾಗ್ರಾಮ್ ಖಾತೆಗಳು ತಾತ್ಕಾಲಿಕವಾಗಿ ಲಭ್ಯವಾಗಿದ್ದವು, ಆದರೆ 16 ಪ್ರಮುಖ ಚಾನೆಲ್‌ಗಳ ಮೇಲಿನ ನಿಷೇಧವು ಜಾರಿಯಲ್ಲಿದೆ. ಈ ಕ್ರಮವು ಭಾರತ–ಪಾಕಿಸ್ತಾನ ಸಂಬಂಧಗಳಲ್ಲಿ ಮುಂದುವರಿದ ಬಿಕ್ಕಟ್ಟನ್ನು ಪ್ರತಿಬಿಂಬಿಸುತ್ತದೆ, ವಿಶೇಷವಾಗಿ ಭಯೋತ್ಪಾದನೆಗೆ ಸಂಬಂಧಿಸಿದ ಉದ್ವಿಗ್ನತೆಗಳ ಮಧ್ಯೆ ಮತ್ತು ಸರ್ಕಾರವು ಸಾಮಾಜಿಕ ಮಾಧ್ಯಮ ನಿರ್ಬಂಧಗಳನ್ನು ನಿಯತಕಾಲಿಕವಾಗಿ ಪರಿಶೀಲಿಸುತ್ತಿದೆ ಎಂದು ವರದಿಯಾಗಿದೆ.

## ಜಾಗತಿಕ ಡಿಜಿಟಲ್ ನಾಯಕತ್ವದತ್ತ ಮುನ್ನಡೆಯುತ್ತಿದೆ ಭಾರತ: ಪ್ರಧಾನಿ ನರೇಂದ್ರ ಮೋದಿ

ಡಿಜಿಟಲ್ ಇಂಡಿಯಾ ಒಂದು ಜನರ ಆಂದೋಲನವಾಗಿದೆ ಮತ್ತು ಆತ್ಮನಿರ್ಭರ ಭಾರತವನ್ನು ನಿರ್ಮಿಸುವಲ್ಲಿ ಮತ್ತು ಭಾರತವನ್ನು ಜಗತ್ತಿಗೆ ವಿಶ್ವಾಸಾರ್ಹ ನಾವೀನ್ಯತೆ ಪಾಲುದಾರನನ್ನಾಗಿ ಮಾಡುವಲ್ಲಿ ಕೇಂದ್ರಬಿಂದುವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಡಿಜಿಟಲ್ ಇಂಡಿಯಾ ಕಾರ್ಯಕ್ರಮದ ಹತ್ತು ವರ್ಷಗಳನ್ನು ಗುರುತಿಸುವ ಬ್ಲಾಗ್‌ನಲ್ಲಿ, ಭಾರತವು ಡಿಜಿಟಲ್ ಆಡಳಿತದಿಂದ ಜಾಗತಿಕ ಡಿಜಿಟಲ್ ನಾಯಕತ್ವಕ್ಕೆ ಮತ್ತು ಭಾರತ ಮೊದಲು ನೀತಿಯಿಂದ ಜಗತ್ತಿಗಾಗಿ ಭಾರತದ ನೀತಿ ಪರಿವರ್ತನೆಗೊಳ್ಳುತ್ತಿದೆ ಎಂದಿದ್ದಾರೆ. ಒಂದು ಕಾಲದಲ್ಲಿ ಭಾರತೀಯರ ತಂತ್ರಜ್ಞಾನವನ್ನು ಬಳಸುವ ಸಾಮರ್ಥ್ಯದ ಬಗ್ಗೆ ಅನುಮಾನಿಸಲಾಗುತ್ತಿತ್ತು, ಆದರೆ ದಶಕಗಳಿಂದ ಈ ಮನಸ್ಥಿತಿ ಬದಲಾಗಿದೆ ಎಂದು ಮೋದಿ ಹೇಳಿದ್ದಾರೆ.

ಭೂಮಿ ಮತ್ತು ಚಂದ್ರನ ನಡುವಿನ ಅಂತರದ 11 ಪಟ್ಟು ದೂರಕ್ಕೆ ಸಮಾನವಾದ 42 ಲಕ್ಷ ಕಿಲೋಮೀಟರ್‌ಗಳಿಗೂ ಹೆಚ್ಚು ಆಪ್ಟಿಕಲ್ ಫೈಬರ್ ಕೇಬಲ್ ಈಗ ಅತ್ಯಂತ ದೂರದ ಹಳ್ಳಿಗಳನ್ನು ಸಹ ಸಂಪರ್ಕಿಸುತ್ತದೆ. ಭಾರತದ 5G ಲೋಕಾರ್ಪಣೆಯು ವಿಶ್ವದ ಅತ್ಯಂತ ವೇಗವಾದದ್ದು ಎಂದು ಪ್ರಧಾನಿ ಮೋದಿ ಹೇಳಿದರು, ಕೇವಲ ಎರಡು ವರ್ಷಗಳಲ್ಲಿ 4.81 ಲಕ್ಷ ಬೇಸ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗಿದೆ. ಹೈ–ಸ್ಪೀಡ್ ಇಂಟರ್ನೆಟ್ ನಗರ ಕೇಂದ್ರಗಳನ್ನು ಮಾತ್ರವಲ್ಲದೆ, ಗಾಲ್ವಾನ್, ಸಿಯಾಚಿನ್ ಮತ್ತು ಲಡಾಖ್ ಸೇರಿದಂತೆ ಮುಂಚೂಣಿ ಮಿಲಿಟರಿ ಪೋಸ್ಟ್‌ಗಳನ್ನು ಸಹ ತಲುಪಿದೆ. ಆಧಾರ್, ಕೋವಿನ್, ಡಿಜಿಲಾಕರ್, ಫಾಸ್ಟ್ಯಾಗ್, ಪಿಎಂ–ವಾನಿ ಮತ್ತು ಒನ್ ನೇಷನ್ ಒನ್ ಸಬ್‌ಸ್ಕ್ರಿಪ್ಷನ್‌ನಂತಹ ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ (ಡಿಪಿಐ) ಅಡಿಯಲ್ಲಿ ವೇದಿಕೆಗಳನ್ನು ಈಗ ಜಾಗತಿಕವಾಗಿ ಅಧ್ಯಯನ ಮಾಡಿ ಅಳವಡಿಸಿಕೊಳ್ಳಲಾಗುತ್ತಿದೆ. ಕೋವಿನ್ ವಿಶ್ವದ ಅತಿದೊಡ್ಡ ಲಸಿಕೆ ಅಭಿಯಾನವನ್ನು ಸಕ್ರಿಯಗೊಳಿಸಿದೆ, 220 ಕೋಟಿಗೂ ಹೆಚ್ಚು QR–ಪರಿಶೀಲಿಸಬಹುದಾದ ಪ್ರಮಾಣಪತ್ರಗಳನ್ನು ನೀಡಿದೆ. ಡಿಜಿಲಾಕರ್ ಈಗ 54 ಕೋಟಿ ಬಳಕೆದಾರರಿಗೆ ಸೇವೆ ಸಲ್ಲಿಸುತ್ತಿದೆ ಮತ್ತು 775 ಕೋಟಿಗೂ ಹೆಚ್ಚು ದಾಖಲೆಗಳನ್ನು ಹೊಂದಿದೆ ಎಂದರು.

ಭಾರತವು ಜಾಗತಿಕವಾಗಿ ಅಗ್ರ ಮೂರು ನವೋದ್ಯಮ ಪರಿಸರ ವ್ಯವಸ್ಥೆಗಳಲ್ಲಿ ಒಂದಾಗಿ ಹೊರಹೊಮ್ಮಿದೆ, 1.8 ಲಕ್ಷಕ್ಕೂ ಹೆಚ್ಚು ನವೋದ್ಯಮಗಳನ್ನು ಹೊಂದಿದೆ. ಈ ಬೆಳವಣಿಗೆಯನ್ನು ಅವರು ಕೇವಲ ನವೋದ್ಯಮ ಚಳುವಳಿಯಲ್ಲ, ಬದಲಾಗಿ ತಂತ್ರಜ್ಞಾನದ ಪುನರುಜ್ಜೀವನ ಎಂದು ಕರೆದರು. ಭಾರತದ ಯುವಜನರಲ್ಲಿ ಂಖ ಪ್ರತಿಭೆಗಳ ನುಗ್ಗುವಿಕೆ ಮತ್ತು AI ಕೌಶಲ್ಯ ಕೇಂದ್ರೀಕರಣದ ಬಲವನ್ನು ಅವರು ಒತ್ತಿ ಹೇಳಿದರು. 1.2 ಬಿಲಿಯನ್ ಡಾಲರ್‌ಗಳ ಇಂಡಿಯಾ AI ಮಿಷನ್‌ನೊಂದಿಗೆ ಭಾರತವು ಈಗ ಅತ್ಯಂತ ಕೈಗೆಟುಕುವ ಕಂಪ್ಯೂಟ್ ತಾಣವಾಗಿದೆ ಎಂದು ಪ್ರಧಾನಿ ಹೇಳಿದರು, ಇದು ಜಾಗತಿಕವಾಗಿ ಹೋಲಿಸಲಾಗದ ದರದಲ್ಲಿ, ಪ್ರತಿ GPU ಗಂಟೆಗೆ $1 ಕ್ಕಿಂತ ಕಡಿಮೆ, 34,000 GPUಗಳಿಗೆ ಪ್ರವೇಶವನ್ನು ಸಕ್ರಿಯಗೊಳಿಸಿದೆ. ಭಾರತವು ಮಾನವೀಯತೆಗೆ ಮೊದಲ ಸ್ಥಾನ ನೀಡುತ್ತಿದೆ ಮತ್ತು AI ಕುರಿತ ನವದೆಹಲಿ ಘೋಷಣೆಯು ಜವಾಬ್ದಾರಿಯೊಂದಿಗೆ ನಾವೀನ್ಯತೆಯನ್ನು ಉತ್ತೇಜಿಸುತ್ತದೆ ಎಂದು ಅವರು ಹೇಳಿದರು.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.